ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 5 । ಸಂಚಿಕೆ : 2 । ಫೆಬ್ರವರಿ - 2023 । ಪುಟಗಳು : 20 । ಬೆಲೆ : 25/-



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


## ಸಮಸ್ತ ಸಹಕಾರಿ ಬಂಧುಗಳಿಗೆ

## ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು

ಆಡಳಿತ ಮಂಡಳಿ ನಿರ್ದೇಶಕರುಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಕಛೇರಿಯ ಕಟ್ಟಡ ಅಂತಿಮ ಹಂತದಲ್ಲಿ**



ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು, ನಿರ್ದೇಶಕರುಗಳಾದ ಶ್ರೀ ಜಿ.ಮಲ್ಲಿಕಾರ್ಜುನಯ್ಯರವರು, ಶ್ರೀ ಡಿ.ಚನ್ನಯ್ಯರವರು ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾಗಿದ್ದು ನಿರ್ದೇಶಕರಾದ ಶ್ರೀ ಬಿ.ಡಿ. ಭೂಕಾಂತರವರಿಗೆ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ವರ್ಷದ ಕನ್ನಡಿಗ–2022 ಪ್ರಶಸ್ತಿ ನೀಡಲಾಗಿದ್ದು, ನಿರ್ದೇಶಕರಾದ ಶ್ರೀ ಹೆಚ್.ಟಿ.ನಾಗೇಶ್‌ರವರು ಬೆಂಗಳೂರುನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಪತ್ತಿನ ಮಹಾಮಂಡಳದ ಆಡಳಿತಮಂಡಳಿ ಸಭೆಯಲ್ಲಿ ಅವರುಗಳನ್ನು ಸನ್ಮಾನಿಸಲಾಯಿತು.







## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

**ಆರ್ಥಿಕ–ಸಾಮಾಜಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಹಕಾರ ಸಂಸ್ಥೆಗಳು ಹೊಸ ಕ್ಷೇತ್ರಗಳತ್ತ ಮುಖ ಮಾಡುತ್ತಿರುವುದು ಸಂತಸ ತಂದಿದೆ. ಕೇಂದ್ರ ಸರ್ಕಾರದ ತೀರ್ಮಾನ–ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಸಹಕಾರ ಸಂಸ್ಥೆಗಳಾದ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (ಎನ್‌ಪಿಡಿಬಿ) ನ್ಯಾಪೆಡ್, ಇಫ್ಕೋ, ಕ್ರಿಭ್ಕೊ, ಎನ್‌ಸಿಡಿಸಿ ಯಂತಹ ಸಂಸ್ಥೆಗಳ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದ ಮೂರು ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ ವಿಚಾರವಾಗಿದೆ.**

# ಸಹಕಾರ ಸಂಘಗಳಲ್ಲಿ ಕೌಶಲ್ಯ ಅಭಿವೃದ್ಧಿ

ಭಾರತ ದೇಶದಲ್ಲಿ ಅಂದಾಜು 8.5 ಲಕ್ಷ ವಿವಿಧ ರೀತಿಯ ಮೂರು ಹಂತಗಳ ಸಹಕಾರ ಸಂಘ ಸಂಸ್ಥೆಗಳಿದ್ದು ಅಂದಾಜು 30 ಕೋಟಿ ಸದಸ್ಯ ಬಳಗವಿದೆ. 118 ವರ್ಷಗಳ ಇತಿಹಾಸವಿರುವ ದೇಶದ ಸಹಕಾರ ಚಳವಳಿ ಜನರ ಆರ್ಥಿಕ–ಸಾಮಾಜಿಕ– ಬೆಳವಣಿಗೆಗೆ ಕಾರಣವಾಗಿದೆ.

ಕೃಷಿ ಆಧಾರಿತ, ಹೈನುಗಾರಿಕೆ, ಪತ್ತು, ಪಟ್ಟಣ ಬ್ಯಾಂಕಿಂಗ್, ಮೀನುಗಾರಿಕೆ ಸೇರಿದಂತೆ ವ್ಯಾಪಾರ ಅಭಿವೃದ್ಧಿ ಹೀಗೆ ಹಲವು ವಲಯಗಳಲ್ಲಿ ಸಹಕಾರಿಗಳು–ಸಹಕಾರ ಸಂಸ್ಥೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಕೌಶಲ್ಯ ಆಧಾರಿತವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲರಿಗೂ ಕಾಲಕಾಲಕ್ಕೆ ವಿಷಯಗಳ ಪುನರ್–ಮನನ ಕಾರ್ಯವನ್ನು, ತರಬೇತಿಯ ಉದ್ದೇಶಗಳನ್ನು ಮಹಾಮಂಡಳಗಳು ನೆರವೇರಿಸುತ್ತಿವೆ.

ಇದರಿಂದ ಸಂಘಗಳ ಉತ್ಪಾದಕತೆಗೆ ಹೆಚ್ಚಿನ ಒತ್ತು ನೀಡಿದಂತಾಗುತ್ತದೆ. ಉದ್ದೇಶಿತ ಗುರಿ ಮುಟ್ಟಲು ಕೌಶಲ ಅಭಿವೃದ್ಧಿ ಪರಿಪೂರ್ಣತೆಗೆ ನೆರವಾಗುವುದರ ಜೊತೆಗೆ ನಿರ್ವಹಿಸುವ ಕೆಲಸದ ಬಗ್ಗೆ ಮಾನಸಿಕವಾಗಿ ತೊಡಗಿಸಿಕೊಳ್ಳಲು ಪೂರಕ ಅಧ್ಯಯನ ಮಾಡಲು ಇಚ್ಛಾಶಕ್ತಿ, ಆಸಕ್ತಿಗಳು ಕೌಶಲ್ಯದಲ್ಲಿ ಸೇರಿರುತ್ತದೆ.

ಆರ್ಥಿಕ–ಸಾಮಾಜಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಹಕಾರ ಸಂಸ್ಥೆಗಳು ಹೊಸ ಕ್ಷೇತ್ರಗಳತ್ತ ಮುಖ ಮಾಡುತ್ತಿರುವುದು ಸಂತಸ ತಂದಿದೆ. ಕೇಂದ್ರ ಸರ್ಕಾರದ ತೀರ್ಮಾನ–ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಸಹಕಾರ ಸಂಸ್ಥೆಗಳಾದ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (ಎನ್‌ಪಿಡಿಬಿ), ನ್ಯಾಪೆಡ್, ಇಫ್ಕೋ, ಕ್ರಿಭ್ಕೊ, ಎನ್‌ಸಿಡಿಸಿ ಯಂತಹ ಸಂಸ್ಥೆಗಳ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದ ಮೂರು ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ ವಿಚಾರವಾಗಿದೆ. ಅವುಗಳೆಂದರೆ, ರಾಷ್ಟ್ರೀಯ ಸಾವಯವ ಸಹಕಾರ ಸಂಸ್ಥೆ, ರಫ್ತು ಆಧಾರಿತ ಸಹಕಾರ ಸಂಸ್ಥೆ ಮತ್ತು ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಸಂಬಂಧಿಸಿದಂತೆ, ಬಿತ್ತನೆ ಬೀಜ ಸಹಕಾರ ಸಂಸ್ಥೆಗಳು. ಈ ಸಂಸ್ಥೆಗಳು ಬಹುರಾಜ್ಯದ ಸಹಕಾರ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಲಿದ್ದು ಮೇಲಿನ ಕ್ರಿಯಾಶೀಲವಾಗಿರುವ ರಾಷ್ಟ್ರೀಯ ಸಹಕಾರ ಸಂಸ್ಥೆಗಳು ಆರಂಭಿಕ ಷೇರುದಾರ ಸಂಸ್ಥೆಗಳಾಗಲಿವೆ. ಮುಂಬರುವ ದಿನಗಳಲ್ಲಿ ಹೊಸ ಸಹಕಾರ ಸಂಸ್ಥೆಗಳ ರಚನೆ–ಕಾರ್ಯ ದಿಂದ ದೇಶದ ಸಹಕಾರ ಚಳುವಳಿಗೆ ಕೋಡು ಮೂಡಿಸುವ ಕೆಲಸವಾಗಬೇಕಿದೆ.

ಒಟ್ಟಾರೆ ದೇಶದ ಸಹಕಾರಭಿವೃದ್ದಿಗೆ ಕೌಶಲ್ಯಾಧಾರಿತ ಸೇವೆಗಳು ಯಶಸ್ಸು ತಂದುಕೊಡಬಲ್ಲವು. ಈ ನಿಟ್ಟಿನಲ್ಲಿ ದೇಶದ ಸಹಕಾರ ಚಳುವಳಿ ಮುಂಬರುವ ದಿನಗಳಲ್ಲಿ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಸಹಕಾರಿ ಬಂಧುಗಳಿಗೆ ಮಹಾಶಿವರಾತ್ರಿಯ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ



**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org



**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)




ಶ್ರೀ ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ತುಮಕೂರು ಈ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಎಂ.ರಾಜುರವರು ಪತ್ತಿನ ಸಹಕಾರ ಸಂಘದ ನಿರ್ದೇಶಕರು ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರು ಆಗಿರುವ ಶ್ರೀ ಜಿ.ಮಲ್ಲಿಕಾರ್ಜುನಯ್ಯರವರು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಶಿಕ್ಷಣ ನಿಧಿಯ ವಂತಿಗೆಯ ಚೆಕ್ಕನ್ನು ನೀಡಿದರು. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಟಿ.ಮಹೇಶ್ ರವರು ಉಪಸ್ಥಿತರಿದ್ದರು.

**ಸುಭಾಷಿತ :** ಟೀಕೆಗಳು ಸಾಯುತ್ತವೆ. ಕೆಲಸಗಳು ಉಳಿಯುತ್ತವೆ. ಬಹುಜನರು ಹೇಳಿದ ಮಾತ್ರಕ್ಕೆ ಸುಳ್ಳು ನಿಜವಾಗುವುದಿಲ್ಲ. – ಕುವೆಂಪು


ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-



**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ರಾಷ್ಟ್ರಮಟ್ಟದಲ್ಲಿ ಮೂರು ಸಹಕಾರ ಸಂಸ್ಥೆಗಳ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ತೀರ್ಮಾನ

**ನವದಹೆಲಿ :** ಸಾವಯವ ಉತ್ಪನ್ನ, ಬಿತ್ತನ ಬೀಜ ಹಾಗೂ ರಫ್ತು ಉತ್ತೇಜಿಸುವ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ಮೂರು ಸಹಕಾರ ಸಂಘಗಳನ್ನು ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

2002ರ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯ ಅಡಿಯಲ್ಲಿ ರಾಷ್ಟ್ರಮಟ್ಟದ ಬಹುರಾಜ್ಯ ಸಂಘಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಹಕಾರ ಸಂಘಗಳ ಬಲವರ್ಧನೆ ಹಾಗೂ ಅವುಗಳನ್ನು ಯಶಸ್ವಿ ಉದ್ಯಮಗಳನ್ನಾಗಿ ರೂಪಿಸುವ ನಿಟ್ಟಿನಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಸಹಕಾರ ಕ್ಷೇತ್ರದ ಪ್ರಯೋಜನ ಪಡೆಯಬೇಕಾದರೆ, ಸಹಕಾರ ಸಂಘಗಳು ಜಾಗತಿಕವಾಗಿ ಚಿಂತಿಸುವ ಹಾಗೂ ಸ್ಥಳೀಯವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು ಎಂದು ಪ್ರಧಾನಿ ಅವರು ಸಭೆಯಲ್ಲಿ ಅಭಿಪ್ರಾಯಪಟ್ಟರು.

ಸಹಕಾರ ವಲಯದಲ್ಲಿ ಉತ್ಪನ್ನಗಳ ರಫ್ತಿಗೆ ಇರುವ ಸಾಧ್ಯತೆಯ ಬಾಗಿಲು ತೆರೆಯಲು ರಾಷ್ಟ್ರೀಯ ಮಟ್ಟದಲ್ಲಿ ಬಹುರಾಜ್ಯ ಸಹಕಾರ ಸಂಘ ಅಸ್ತಿತ್ವಕ್ಕೆ ತರಲಾಗುತ್ತಿದೆ. ಸರ್ಕಾರದ ವಿವಿಧ ನೀತಿಗಳ ಲಾಭ ಪಡೆಯುವ ನಿಟ್ಟಿನಲ್ಲಿ ಈ ಕ್ಷೇತ್ರಕ್ಕೆ ಮಾರ್ಗದರ್ಶನ ನೀಡುವುದು ಈ ಸಂಘದ ಉದ್ದೇಶವಾಗಿದೆ. ರಫ್ತು ಮೇಲೆ ಹೆಚ್ಚು ಒತ್ತು ನೀಡುವ ಇಂತಹ ಸಂಘ ಸ್ಥಾಪನೆಯಿಂದ ದೇಶದ ವಿವಿಧ ಹಂತಗಳಲ್ಲಿ ಉತ್ಪಾದನೆ ಹೆಚ್ಚಳವಾಗಿ, ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಸಹಕಾರ ಸಂಘಗಳ ಮೂಲಕ ರಫ್ತು ಹೆಚ್ಚಿಸುವುದು ಆತ್ಮನಿರ್ಭರವನ್ನು ಸಾಕಾರವಾಗಲಿಸಲಿದೆ ಎಂದು ಸಂಪುಟ ಸಭೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾವಯವ ಉತ್ಪನ್ನಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸ್ಥಾಪನೆಯಾಗಲಿರುವ ಬಹುರಾಜ್ಯ ಸಂಘವು ಸಾವಯವ ಉತ್ಪನ್ನಗಳ ಪೂರೈಕೆ ಸರಪಳಿ, ತಾಂತ್ರಿಕ ನೆರವು, ತರಬೇತಿ, ಸಾಮರ್ಥ್ಯ ವೃದ್ಧಿ ಹಾಗೂ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ರೂಪಿಸುವ ಚಟುವಟಿಕೆಗಳನ್ನು ನಿರ್ವಹಣೆ ಮಾಡಲಿದೆ. ವಿದೇಶಗಳಲ್ಲಿ ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವ ನಿಟ್ಟಿನಲ್ಲಿ ರಫ್ತು ಸಂಘದ ಜೊತೆ ಇದು ಕೆಲಸ ಮಾಡಲಿದೆ. ಸಾವಯವ ಉತ್ಪನ್ನಗಳ ಅಧಿಕ ಬೆಲೆಯ ಲಾಭವನ್ನು, ಅವುಗಳನ್ನು ಬೆಳೆಯುವ ರೈತರಿಗೂ ತಲುಪಿಸಲು ಸಂಘ ನೆರವಾಗಲಿದೆ. ಸಾಮಾನ್ಯ ಬೇಸಾಯದ ಪದ್ಧತಿ ಮತ್ತು ಸಾವಯುವ ಕೃಷಿ ಪದ್ಧತಿ ನಡುವೆ ಸಮತೋಲನ ಕಾಯ್ದುಕೊಳ್ಳಲಾಗುತ್ತದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.


### ಒಂದೇ ಬ್ರ್ಯಾಂಡ್‌ನಲ್ಲಿ ಬಿತ್ತನೆ ಬೀಜ

ಬಿತ್ತನೆ ಬೀಜಕ್ಕೆ ಸಂಬಂಧಪಟ್ಟ ಬಹುರಾಜ್ಯ ಸಹಕಾರ ಸಂಘವು ರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪನೆಯಾಗಲಿದೆ. ಬೀಜಗಳ ಉತ್ಪಾದನೆ, ಪ್ರಮಾಣೀಕರಣ, ಖರೀದಿ, ಸಂಗ್ರಹಣೆ, ಬ್ರ್ಯಾಂಡಿಂಗ್, ಪ್ಯಾಕೇಜಿಂಗ್, ವಿತರಣೆ, ಸಂಶೋಧನೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ಇದು ಕೇಂದ್ರೀಯ ಸಂಸ್ಥೆಯ ರೀತಿ ಕೆಲಸ ಮಾಡಲಿದೆ. ದೇಸಿ ಬೀಜಗಳನ್ನು ಪ್ರೋತ್ಸಾಹಿಸುವ ಹಾಗೂ ಅವುಗಳನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಅಭಿವೃದ್ಧಿ ಹೊಣೆಯನ್ನೂ ಈ ಸಂಘ ನಿರ್ವಹಿಸಲಿದೆ. ಸಹಕಾರ ಸಂಘಗಳ ಜಾಲವನ್ನು ಬಳಸಿಕೊಂಡು, ಒಂದೇ ಬ್ರ್ಯಾಂಡ್‌ನ ಅಡಿಯಲ್ಲಿ ಪ್ರಮಾಣೀಕೃತ ಬೀಜಗಳನ್ನು ಬಿತ್ತನೆಗೆ ಪೂರೈಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.



## ಪತ್ತಿನ ಸಹಕಾರ ಮಹಮಂಡಳದ ಡೈರಿ, ಕ್ಯಾಲೆಂಡರ್‌ಗಳನ್ನು ಸಹಕಾರ ಇಲಾಖಾ ಹಿರಿಯ ಅಧಿಕಾರಿಗಳಿಗೆ ನೀಡಿ ಹೊಸ ವರ್ಷದ ಶುಭಾಶಯಗಳನ್ನು ಕೋರಲಾಯಿತು







# ಮಂಡ್ಯದ ಗೆಜ್ಜಲಗೆರೆಯಲ್ಲಿ ಜಿಲ್ಲಾ ಹಾಲು ಒಕ್ಕೂಟದ ಮೆಗಾ ಡೇರಿ : ಅಮಿತ್ ಶಾ ಚಾಲನೆ



**ಮಂಡ್ಯ :** ಮದ್ದೂರಿನ ಗೆಜ್ಜಲಗೆರೆಯಲ್ಲಿರುವ ಮನ್ಮುಲ್ ಮೆಗಾ ಡೈರಿ ಅಮಿತ್ ಶಾ ಉದ್ಘಾಟಿಸಿದ್ದಾರೆ. ಮೆಗಾ ಡೈರಿಯ ವಿಶೇಷತೆ: ಮದ್ದೂರಿನ ಗೆಜ್ಜಲಗೆರೆಯಲ್ಲಿರುವ ಮನ್ಮುಲ್ ಮೆಗಾ ಡೈರಿಯು, 47 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣವಾಗಿದ್ದು, ಸುಮಾರು 260.9 ಕೋಟಿ ವೆಚ್ಚದ ಹಾಲು ಉತ್ಪಾದಕ ಘಟಕವಾಗಿದೆ. ಒಂದು ದಿನಕ್ಕೆ 30 ಮೆಟ್ರಿಕ್ ಟನ್ ಹಾಲಿನ ಪೌಡರ್, 4 ಮೆಟ್ರಿಕ್ ಟನ್ ಕೋವಾ, 2 ಮೆಟ್ರಿಕ್ ಟನ್ ಪನ್ನೀರ್, 12 ಮೆಟ್ರಿಕ್ ಟನ್ ತುಪ್ಪ, 10 ಮೆಟ್ರಿಕ್ ಟನ್ ಬೆಣ್ಣೆ, 10 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಈ ಮೆಗಾ ಡೈರಿಯಿಂದ ಒಂದು ವರ್ಷಕ್ಕೆ 6 ಕೋಟಿ ಹಣ ಉಳಿತಾಯವಾಗಲಿದೆ.

ಡೇರಿ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ದೇವೇಗೌಡರು ಆಗಮಿಸಿದ್ದರು. ಆದಿ ಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥಶ್ರೀ ಸಾನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಸಚಿವ ಎಸ್.ಟಿ. ಸೋಮಶೇಖರ್ ಸೇರಿದಂತೆ ಗಣ್ಯರು ಭಾಗಿಯಾಗಿದ್ದರು.

'ಗುಜರಾತ್‌ನಲ್ಲಿ ಸಹಕಾರ ಒಕ್ಕೂಟವು ಪ್ರಗತಿಯ ಹಾದಿಯಲ್ಲಿದೆ. ಹಾಗೆಯೇ 1975ರಿಂದಲೂ ಕೆಎಂಎಫ್‌ಕೂಡ ಅಭಿವೃದ್ಧಿ ಹೊಂದುತ್ತಿದೆ. ಅಮುಲ್ ಹಾಗೂ ನಂದಿನಿ ವ್ಯವಹಾರದಲ್ಲಿ ತೊಡಗಿಕೊಂಡರೆ ಕರ್ನಾಟಕದ ಹಾಲು ಉತ್ಪಾದಕರಿಗೆ ಇನ್ನಷ್ಟು ಅನುಕೂಲವಾಗುತ್ತದೆ' ಎಂದರು. 'ಮುಂದಿನ ಮೂರು ವರ್ಷಗಳಲ್ಲಿ ದೇಶದಲ್ಲಿ 2 ಲಕ್ಷಕ್ಕೂ ಅಧಿಕ ಪ್ರಾಥಮಿಕ ಡೇರಿಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಥಾಪನೆ ಮಾಡಲಾಗುವುದು. ಆ ಮೂಲಕ ಹಾಲಿನ ಉತ್ಪನ್ನಗಳನ್ನು ಇತರ ರಾಷ್ಟ್ರಗಳಿಗೆ ರಫ್ತು ಮಾಡುವ ಗುರಿ ಹೊಂದಲಾಗಿದೆ' ಎಂದರು.

'ಕರ್ನಾಟಕದಲ್ಲಿ ಪ್ರಸ್ತುತ ಹಾಲು ಉತ್ಪಾದಕರಿಗೆ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪ್ರತಿ ಲೀಟರ್ ಹಾಲಿಗೆ ರೂ. 5 ಪ್ರೋತ್ಸಾಹ ಧನ ನೀಡುತ್ತಿದೆ. ಇದರಿಂದ ಸುಮಾರು ರೂ. 36 ಲಕ್ಷ ಹಾಲು ಉತ್ಪಾದಕರು ಇದರ ಉಪಯೋಗ ಪಡೆಯುತ್ತಿದ್ದಾರೆ. ಮನ್‌ಮುಲ್ ಆವರಣದಲ್ಲಿ ರೂ. 260 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮೆಗಾ ಡೇರಿ ಉದ್ಘಾಟನೆ ಮಾಡುತ್ತಿರುವುದು ಸಂತಸ ತಂದಿದೆ' ಎಂದರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಮಾತನಾಡಿ, 'ನಾನು ಪ್ರಧಾನಿಯಾಗಿದ್ದಾಗ ಸಹಕಾರ ಕ್ಷೇತ್ರದ ಉನ್ನತಿಗೆ ದುಡಿದಿದ್ದೆ. ದೇಶದ ಹಲವಾರು ಹಾಲಿನ ಸೊಸೈಟಿಗಳನ್ನು ಒಟ್ಟುಗೂಡಿಸಿ ಹಾಲು ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲು ಶ್ರಮಿಸಿದ್ದೆ' ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ದೇಶ ಹಾಗೂ ರಾಜ್ಯದಲ್ಲಿ ಕ್ಷೀರ ಕ್ರಾಂತಿ ನಡೆಯುತ್ತಿದೆ. ಹೈನುಗಾರಿಕೆಯಿಂದ ರೈತರು ಆರ್ಥಿಕ ಪ್ರಗತಿ ಸಾಧಿಸುತ್ತಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಈ ಹಿಂದೆ ನಮ್ಮ ರಾಜ್ಯದ ಮೊದಲ ಬೆಂಗಳೂರು ಮೆಗಾ ಡೈರಿ ನಿರ್ಮಾಣಕ್ಕೆ ಕಾರಣರಾಗಿದ್ದವರು, ಅದನ್ನು ಯಾರೂ ಮರೆಯುವುದಿಲ್ಲ' ಎಂದರು. ಕೇಂದ್ರ ಸಚಿವ ಪ್ರಲ್ಹಾದ್‌ಜೋಶಿ, ಕೆ.ಸಿ.ನಾರಾಯಣಗೌಡ, ಶಾಸಕರಾದ ಡಿ.ಸಿ.ತಮ್ಮಣ್ಣ, ಪುಟ್ಟರಾಜು, ಸುರೇಶ್‌ಗೌಡ, ಅನ್ನದಾನಿ, ವಿಧಾನ ಪರಿಷತ್ ಸದಸ್ಯ ಮಧು ಜಿ ಮಾದೇಗೌಡ, ಮನಮುಲ್ ಅಧ್ಯಕ್ಷ ರಾಮಚಂದ್ರು ಇದ್ದರು.





# ಯಶಸ್ವಿನಿ ಯೋಜನೆ ನೋಂದಣಿ ಗುರಿ ಸಾಧನೆ
# ಸಹಕಾರ ಅಭಿವೃದ್ಧಿಯಲ್ಲಿ ಇಲಾಖಾಧಿಕಾರಿಗಳ ಪಾತ್ರ ಹಿರಿದು – ಸಚಿವ ಎಸ್.ಟಿ. ಸೋಮಶೇಖರ್

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಇಲಾಖೆ ಪತ್ರಾಂಕಿತ ಅಧಿಕಾರಿಗಳ ಒಕ್ಕೂಟದ 2023ರ ದಿನಚರಿ ಪುಸ್ತಕವನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಬಿಡುಗಡೆಗೊಳಿಸಿ, ಸಮಸ್ತ ಸಹಕಾರಿಗಳಿಗೆ, ಸಹಕಾರ ಇಲಾಖಾ ಅಧಿಕಾರಿಗಳಿಗೆ ನೂತನ ವರ್ಷದ ಶುಭಾಶಯಗಳನ್ನು ಸಲ್ಲಿಸಿದರು. ನಂತರ ಮಾತನಾಡಿದ ಅವರು ದೇಶದಲ್ಲಿ ಕರ್ನಾಟಕ ರಾಜ್ಯದ ಸಹಕಾರ ವಲಯ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಸದಸ್ಯ ಸೇವೆಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಂಡಿದೆ. ಸಹಕಾರ ಅಭಿವೃದ್ಧಿಯಲ್ಲಿ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಾತ್ರ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು.

ಮುಂಬರುವ ದಿನಗಳಲ್ಲಿ ರಾಜ್ಯದ ಸಹಕಾರ ವಲಯ ಪ್ರಥಮ ಸ್ಥಾನಕ್ಕೆ ಏರಲು ಬದ್ಧತೆ, ದಕ್ಷತೆಯಿಂದ ಕಾರ್ಯನಿರ್ವಹಿಸಿ ಸಹಕಾರ ಚಳವಳಿಯನ್ನು ಮತ್ತಷ್ಟು ಬಲಪಡಿಸುವಂತೆ ಸಲಹೆ ಮಾಡಿದರು. ರಾಜ್ಯದ ಸಹಕಾರಿಗಳ ಮಹತ್ವಾಕಾಂಕ್ಷಿ "ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ" ಮರು ಜ್ಯಾರಿಗೆ ತಂದ ನಂತರ ನಿಗದಿತ 30 ಲಕ್ಷ ಸದಸ್ಯತ್ವ ನೋಂದಣಿ ಗುರಿ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಸಹಕಾರಿಗಳು ಈ ಯೋಜನೆಯಲ್ಲಿ ಪ್ರಯೋಜನ ಪಡೆದು ಆರೋಗ್ಯವಂತರಾಗಿರಬೇಕು. ಸರ್ಕಾರ ಸಹಕಾರ ವಲಯದ ಮೂಲಕ ಎಲ್ಲ ರೀತಿಯ ನೆರವು ನೀಡಲಿದೆ ಎಂದರು.

ಸಹಕಾರ ಇಲಾಖೆಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ಮಾತನಾಡಿ, ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ಪರಿಣಾಮಕಾರಿಯಾಗಿದೆ. ಇಲಾಖಾ ಅಧಿಕಾರಿಗಳು ಸಹಕಾರ ಸಂಸ್ಥೆಗಳಿಗೆ ಉಪಯುಕ್ತ ಮಾರ್ಗದರ್ಶನ ಮಾಡಿ ಚಳವಳಿಯನ್ನು ಮುನ್ನಡೆಸಲು ನೆರವಾಗಬೇಕು ಎಂದರು.

ಕರ್ನಾಟಕ ರಾಜ್ಯದ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ಮಾತನಾಡಿ, ರಾಜ್ಯದ ಸಹಕಾರ ವಲಯ ಬಲಿಷ್ಠವಾಗಿದ್ದು, ಈ ಕ್ಷೇತ್ರದಲ್ಲಿ ದೊರೆಯುವ ಸೇವೆಗಳು ಮತ್ತಷ್ಟು ಜನರಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಿ, ಬೆಳವಣಿಗೆಗೆ ಪೂರಕವಾಗಿ ಕೆಲಸ ನಿರ್ವಹಿಸಿ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಸಹಕಾರ ಇಲಾಖೆ ಪತ್ರಾಂಕಿತ ಅಧಿಕಾರಿಗಳ ಒಕ್ಕೂಟದ ಅಧ್ಯಕ್ಷರು, ಅಪರ ನಿಬಂಧಕರಾದ ಎ.ಸಿ. ದಿವಾಕರ್ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಪರ ನಿಬಂಧಕರುಗಳಾದ ಅರಳಿ ಸೂರ್ಯಕಾಂತ್, ವೈ.ಹೆಚ್. ಗೋಪಾಲಕೃಷ್ಣ, ಕೆ.ಎಸ್. ನವೀನ್, ಪ್ರಕಾಶ್ ರಾವ್, ಆರ್. ಶ್ರೀಧರ್ ಸೇರಿದಂತೆ ಅಪರನಿಬಂಧಕರು, ಜಂಟಿ ನಿಬಂಧಕರು, ಉಪನಿಬಂಧಕರು, ಸಹಾಯಕ ನಿಬಂಧಕರುಗಳು ಉಪಸ್ಥಿತರಿದ್ದರು.

# ವಿಕಸಿತ ಸಿರಿಕನ್ನಡವೀಗ ವಿಶ್ವಮುಖಿ

## ಐದನೇ ತರಗತಿವರೆಗೆ ಕನ್ನಡ ಕಡ್ಡಾಯವಾಗಲಿ




ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ಡಾ. ದೊಡ್ಡರಂಗೇಗೌಡ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಸಾಪ ಅಧ್ಯಕ್ಷ ಡಾ. ಮಹೇಶ ಜೋಶಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ನೆಹರು ಓಲೇಕಾರ್ ಇತರರಿದ್ದರು.

**ಕನಕ–ಶರೀಪ–ಸರ್ವಜ್ಞ ಪ್ರಧಾನ ವೇದಿಕೆ (ಹಾವೇರಿ) :** ಐದನೇ ತರಗತಿವರೆಗೆ ಕನ್ನಡ ಕಲಿಕೆ ಕಡ್ಡಾಯ. ತದನಂತರ ನಿಮ್ಮ ಬೌದ್ಧಿಕ ಸಾಮಥ್ಯದ ಮೇಲೆ ಎಷ್ಟು ಭಾಷೆಗಳನ್ನಾದರೂ ಕಲಿಯಿರಿ. ಅದಕ್ಕೆ ನಮ್ಮ ವಿರೋಧವಿಲ್ಲ ಎಂಬ ಸಂದೇಶ ಸಾರುವ ಮೂಲಕ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ. ದೊಡ್ಡರಂಗೇಗೌಡ ಕನ್ನಡಗರಿಗೆ ಕನ್ನಡಾಭಿಮಾನದ ಪಾಠ ಮಾಡಿದರು.

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡುವ ಕರ್ತವ್ಯ ನಮ್ಮೆಲ್ಲರದ್ದಾಗಿದೆ. ಕಾಸರಗೋಡಿನ ಕನ್ನಡ ಶಾಲೆಗಳಲ್ಲಿ ಮಲಯಾಳಿ ಶಿಕ್ಷಕರ ನೇಮಕ ಮಾಡುತ್ತಿರುವುದು ಖಂಡನೀಯ. ಇಂಗ್ಲೀಷ್ ಭಾಷೆಯ ವ್ಯಾಮೋಹ ತೊರೆದು ಭಾಷಾಪ್ರೇಮ ಬೆಳೆಸಬೇಕು. ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಕನ್ನಡದ ಅಸ್ಮಿತೆ ಉಳಿಸಿ ಬೆಳೆಸುವಂತೆಯೂ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಕನ್ನಡವೇ ಮೊದಲು, ಉಳಿದಿದ್ದೆಲ್ಲ ಆಮೇಲೆ. ಇದು ಕನ್ನಡದ ಸೈದ್ಧಾಂತಿಕ ಕರ್ತವ್ಯ. ಎಡ, ಬಲ, ಮಧ್ಯಮಗಳೇನೆ ಇರಲಿ, ಕನ್ನಡ ಎಂಬುದು ಅನ್ನದ ಹಕ್ಕಿನ ಭಾಷೆ. ಮಹತ್ವಾಕಾಂಕ್ಷೆಯ ಭಾಷೆ, ಉದ್ಯೋಗಶೀಲತೆಯ ಭಾಷೆ, ಕ್ರಿಯಾಶೀಲ ಭಾಷೆ ನಮ್ಮ ಕನ್ನಡ ಎನ್ನುವುದನ್ನು ಯಾರೂ ಮರೆಯಬಾರದು ಎಂದು ದೊಡ್ಡರಂಗೇಗೌಡರು ಕಿವಿಮಾತು ಹೇಳಿದರು.


### ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಶೇ.80 ಉದ್ಯೋಗ ಶೀಘ್ರವೇ ಕಾನೂನು ಅನುಷ್ಠಾನ – ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ರಾಜ್ಯದಲ್ಲಿ ಕನ್ನಡಿಗನೇ ಸಾರ್ವಭೌಮ. ಉದ್ಯೋಗದ ವಿಷಯದಲ್ಲೂ ಕೂಡ, ಕೈಗಾರಿಕೆಗಳಲ್ಲಿ ಶೇ. 80ರಷ್ಟು ಕನ್ನಡಿಗರಿಗೆ ಕೆಲಸ ನೀಡುವುದನ್ನು ಕಡ್ಡಾಯಗೊಳಿಸುವ ಕಾನೂನು ಶೀಘ್ರ ಜಾರಿ ಆಗಲಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದರು. ಮುಂಬರುವ ಅದಿವೇಶನದಲ್ಲಿ ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ವಿಧೇಯಕಕ್ಕೆ ಅನುಮೋದನೆ ಪಡೆಯಲಾಗುವುದು. ಇದಕ್ಕೂ ಮುನ್ನ ವಿಧಾನಸಭೆ ಒಳ–ಹೊರಗೆ ಈ ಬಗ್ಗೆ ಸುದೀರ್ಘ ಚರ್ಚೆ ಆಗಬೇಕು ಎಂದು ಆಶಯ ವ್ಯಕ್ತಪಡಿಸಿದರು. ವಿಧೇಯಕಕ್ಕೆ ಕಾನೂನು ಆಯೋಗ ಸ್ಪಷ್ಟ ಅಭಿಪ್ರಾಯ ನೀಡಿದೆ. ಆದರೆ, ಇದರಲ್ಲಿ ಸಾಹಿತ್ಯಕ ಅಂಶಗಳಿಲ್ಲ ಎಂದು ಸಾಹಿತ್ಯ ಪರಿಷತ್ ಕೆಲ ಬದಲಾವಣೆ ಕೋರಿದೆ. ಗಡಿನಾಡು ಕನ್ನಡಿಗರಿಗೆ ಸರ್ಕಾರ ಪ್ಯಾಕೇಜ್ ಘೋಷಿಸಿದೆ. ಸಮ್ಮೇಳದ ಚರ್ಚೆಗಳ ಆಧಾರದಲ್ಲಿ ಸಮಾರೋಪದಲ್ಲಿ ತೀರ್ಮಾನಿಸಿ ಭರವಸೆ ನೀಡಲಾಗುವುದು ಎಂದರು.

ಶಾಸ್ತ್ರೀಯ ಭಾಷೆ ಅಧ್ಯಯನಕ್ಕೆ ಸಾಹಿತಿಗಳ ಸಮಿತಿ : ಗಡಿ ಪ್ರಾಧಿಕಾರಕ್ಕೆ 100 ಕೋಟಿ ರೂ. : ವಲಸೆ ಬರುವವರಿಗೆ ಕನ್ನಡ ಕಲಿಕೆ

# ಹಾವೇರಿ ಸಮ್ಮೇಳನದಲ್ಲಿ ಬಸವರಾಜ ಬೊಮ್ಮಾಯಿ ಘೋಷಣೆ





**ಹಾವೇರಿ :** ಶಾಸ್ತ್ರೀಯ ಭಾಷೆ ಸ್ಥಾನಮಾನದ್ಧ ಸಂಶೋಧನೆಗೆ ಸಲಹೆ ನೀಡಲು ಸಾಹಿತಿಗಳ ಸಮಿತಿ ರಚನೆ, ಗಡಿನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ 100 ಕೋಟಿ ಅನುದಾನ, ಕನ್ನಡಕ್ಕಾಗಿ ಹೋರಾಟ ಮಾಡಿದವರ ಮೇಲಿನ ಕೇಸ್ ಶೀಘ್ರ ವಾಪಸ್, ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ವಲಸೆ ಬಂದವರಿಗೆ ಕನ್ನಡ ಕಲಿಸುವ ಅಭಿಯಾನ ಸೇರಿದಂತೆ ಕನ್ನಡ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಲವು ಮಹತ್ವದ ಘೋಷಣೆ ಮಾಡಿದ್ದಾರೆ. ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಈ ಘೋಷಣೆ ಮಾಡಿದರು.

ಸಮ್ಮೇಳನದ ಸರ್ವಾಧ್ಯಕ್ಷ ಡಾ.ದೊಡ್ಡರಂಗೇಗೌಡರು ಮೊದಲ ದಿನವೇ ಶಾಸ್ತ್ರೀಯ ಭಾಷೆ ಮತ್ತು ಕನ್ನಡಕ್ಕಾಗಿ ಹೋರಾಟ ಮಾಡಿದವರ ಮೇಲಿನ ಕೇಸ್‌ಗೆ ಸಂಬಂಧಿಸಿ ಸರ್ಕಾರದ ತಿದಿಯೊತ್ತಿದ್ದರು. ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ಬೊಮ್ಮಾಯಿ ಅವರು ಈ ನಿಟ್ಟಿನಲ್ಲಿ ಸಮಾರೋಪ ಭಾಷಣದಲ್ಲಿ ಮಹತ್ವದ ನಿರ್ಧಾರಗಳನ್ನು ಪ್ರಕಟಿಸಿದರು. ಅಲ್ಲದೆ ಹಾವೇರಿ ಸಮ್ಮೇಳನದ ನಿರ್ಣಯಗಳನ್ನು ಪರಿಶೀಲಿಸಿ ಅನುಷ್ಠಾನಕ್ಕೆ ತರುವುದಾಗಿ ಹೇಳಿದರು.

**ಸಾಹಿತಿಗಳ ಸಮಿತಿ :** ಕನ್ನಡ ಶಾಸ್ತ್ರೀಯ ಭಾಷೆಯ ಅಧ್ಯಯನ ವಿಚಾರವಾಗಿ ಉದ್ಘಾಟನಾ ಭಾಷಣದಲ್ಲೇ ಸಮ್ಮೇಳನದ ಸರ್ವಾಧ್ಯಕ್ಷ ಡಾ. ದೊಡ್ಡರಂಗೇಗೌಡ ಅವರು ನೇರವಾಗಿ ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದ್ದರು. ಸಮ್ಮೇಳನಾಧ್ಯಕ್ಷರ ಆಕ್ಷೇಪವನ್ನು ಸಲಹೆಯಾಗಿ ಸ್ವೀಕರಿಸಿದ ಬೊಮ್ಮಾಯಿ ಅವರು ಶಾಸ್ತ್ರೀಯ ಭಾಷೆ ಕುರಿತು ಸಂಶೋಧನೆ, ಗ್ರಂಥಾಲಯ, ಚರ್ಚೆಗಳಿಗೆ ಮಾರ್ಗದರ್ಶನ ಮಾಡಲು ಸಮ್ಮೇಳನಾಧ್ಯಕ್ಷರ ಮಾರ್ಗದರ್ಶನದಲ್ಲಿ ನಾಡಿನ ಹಿರಿಯ ಸಾಹಿತಿಗಳ ಸಮಿತಿ ರಚಿಸಲಾಗುವುದು ಎಂದು ಘೋಷಿಸಿದರು. ಜತೆಗೆ, ಸಮಿತಿ ಸೂಚಿಸುವ ಕಾರ್ಯಗಳಿಗೆ ಎಷ್ಟು ಅನುದಾನ ಬೇಕೋ ಅಷ್ಟುಕೊಡಲು ಸರ್ಕಾರ ಸಿದ್ಧವಿದೆ. ಅತ್ಯಂತ ಪ್ರಾಚೀನ ಭಾಷೆ ಎಂಬುದರ ಪುರಾವೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಸಮಿತಿ ಸಂಶೋಧನೆಗೆ ಸಲಹೆ ಮಾಡಲಿ ಎಂದು ತಿಳಿಸಿದರು. 2008ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆ. ಈವರೆಗೆ ಕೇಂದ್ರ ಸರ್ಕಾರದಿಂದ ಇದಕ್ಕೆ 13.30 ಕೋಟಿ ನೆರವು ದೊರೆತಿದೆ. ಇದರಡಿ ಪ್ರಾಚೀನ ಕನ್ನಡ, ಮಧ್ಯಕನ್ನಡ ಹಾಗೂ ನವ್ಯ ಕನ್ನಡದ ಬಗ್ಗೆ ಸಂಶೋಧನೆಗಳು ನಡೆಯಬೇಕಿದೆ. ಮೈಸೂರು ವಿಶ್ವ ವಿದ್ಯಾಲಯವು ಈಗಾಗಲೇ ಅಧ್ಯಯನ ಕೇಂದ್ರ ತೆರೆಯಲು ದೊಡ್ಡ ಕಟ್ಟಡ ನೀಡಿದೆ ಎಂದು ಹೇಳಿದರು.

**ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ತೆರೆ :** ಏಲಕ್ಕಿ ನಾಡು ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಭಾನುವಾರ ಅದ್ದೂರಿ ತೆರೆ ಬಿತ್ತು. ಸಮ್ಮೇಳನದ ಕೊನೆ ದಿನವೇ ಸರಿಸುಮಾರು 2 ಲಕ್ಷಕ್ಕೂ ಅಧಿಕ ಜನಸಾಗರ ಹರಿದು ಬಂದಿದ್ದರೆ, 3 ದಿನ ಕಾಲ ಸುಮಾರು 5ರಿಂದ 5.5 ಲಕ್ಷ ಸಾಹಿತ್ಯಾಸಕ್ತರು ಆಗಮಿಸಿದ್ದರು. ಧೂಳಿನ ಕಿರಿಕಿರಿ ಇಲ್ಲದೆ, ಅಚ್ಚುಕಟ್ಟಾಗಿ ಸಮ್ಮೇಳನ ಆಯೋಜಿಸುವ ಮೂಲಕ ಹಾವೇರಿ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಯಿತು.

**ಮಂಡ್ಯದಲ್ಲಿ 87ನೇ ಸಾಹಿತ್ಯ ಸಮ್ಮೇಳನ :** ಹಲವು ಜಿಲ್ಲೆಗಳ ಭಾರಿ ಪೈಪೋಟಿ ನಡುವೆ ಸಕ್ಕರೆ ನಾಡು ಮಂಡ್ಯಕ್ಕೆ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಆತಿಥ್ಯ ದೊರೆಯಿತು. ಏಲಕ್ಕಿ ಕಂಪಿನ ನಾಡಿನಲ್ಲಿ ನಡೆಯುತ್ತಿರುವ 86ನೇ ಸಾಹಿತ್ಯ ಜಾತ್ರೆ ವೇಳೆ ಸಂಪ್ರದಾಯದಂತೆ ಮುಂದಿನ ಸಮ್ಮೇಳನದ ಸ್ಥಳ ಘೋಷಣೆ ಮಾಡಲಾಯಿತು.

**ಕೇಸ್ ಶೀಘ್ರ ವಾಪಸ್ :** ಕನ್ನಡಕ್ಕಾಗಿ ಹೋರಾಟ ನಡೆಸಿದವರ ಮೇಲಿರುವ ಕೇಸ್‌ಗಳನ್ನು ವಾಪಸ್ ಪಡೆಯಲು ಸರ್ಕಾರ ಬದ್ಧವಾಗಿದೆ. ಈ ಹಿಂದೆ ತಾವು ಗೃಹ ಸಚಿವರಾಗಿದ್ದಾಗಲೇ ಕೇಸ್‌ಗಳನ್ನು ವಾಪಸ್ ಪಡೆಯಲಾಗಿತ್ತು. ಆದರೆ ಇದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಅದೀಗ ತೆರವಾಗಿದೆ. ಹೀಗಾಗಿ ಶೀಘ್ರದಲ್ಲೇ ಕೇಸ್ ವಾಪಸ್ ಪಡೆಯಲು ಬೇಕಾದ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

**ಗಡಿಯಾಚೆಗಿನವರಿಗೂ ಪಿಂಚಣಿ :** ಗಡಿಯಾಚೆಗಿರುವ ಕನ್ನಡಿಗರಲ್ಲೂ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪಾಲ್ಗೊಂಡವರಿದ್ದಾರೆ. ಅಂಥವರನ್ನು ನಮ್ಮ ಸರ್ಕಾರ ಗುರುತಿಸುವ ಕೆಲಸ ಮಾಡಲಿದೆ.

## ಸಮ್ಮೇಳನದಲ್ಲಿ ಐದು ನಿರ್ಣಯ ಅಂಗೀಕಾರ

1. ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕಕ್ಕೆ ಕೂಡಲೇ ಸುಗ್ರೀವಾಜ್ಞೆ ಮೂಲಕ ಕಾನೂನಿನ ರೂಪ ನೀಡಿ ಜಾರಿಗೆ ತರಬೇಕು.
2. ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದದ ಸಂಬಂಧ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿನಂತೆ ಕ್ರಮ ಕೈಗೊಳ್ಳಬೇಕು
3. ಕನ್ನಡಕ್ಕಾಗಿ ಹೋರಾಡಿದ ಕನ್ನಡ ಚಳವಳಿಗಾರರ ಮೇಲಿನ ಮೊಕದ್ದಮೆಗಳನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು.
4. ಕನ್ನಡ ಕರ್ನಾಟಕದ ಸಾರ್ವಭೌಮ ಭಾಷೆ. ಅದರ ಮೇಲೆ ಹಿಂದಿ ಅಥವಾ ಇನ್ನಾವುದೇ ಭಾಷೆಯ ಆಕ್ರಮಣ, ಹೇರಿಕೆಗೆ ಖಂಡನೆ
5. ದಾವಣಗೆರೆಯಲ್ಲಿ ನಿಗದಿಯಾಗಿರುವ ವಿಶ್ವ ಕನ್ನಡ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆಯಬೇಕು

ರಾಜ್ಯದಲ್ಲಿ ಏಕೀಕರಣಕ್ಕಾಗಿ ಕೆಲಸ ಮಾಡಿದವರಿಗೆ ಯಾವ ರೀತಿ ಪಿಂಚಣಿ ನೀಡಲಾಗುತ್ತಿದೆಯೋ ಅದೇ ರೀತಿ ಅಲ್ಲಿನ ಕನ್ನಡ ಹೋರಾಟಗಾರರಿಗೆ ಪಿಂಚಣಿ ನೀಡಲಾಗುವುದು. ಇದನ್ನು ಶೀಘ್ರ ಜಾರಿಗೊಳಿಸಲಾಗುವುದು. ಈ ಮೂಲಕ ಗಡಿಯಾಚೆಯಿರುವ ಕನ್ನಡ ಏಕೀಕರಣ ಹೋರಾಟಗಾರರನ್ನು ಸರ್ಕಾರ ಗುರುತಿಸಿ ಗೌರವಿಸಲಿದೆ ಎಂದು ಭರವಸೆ ನೀಡಿದರು.

ಜತೆಗೆ, ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದ್ಯ. 25 ಕೋಟಿ ಅನುದಾನ ನೀಡಿದ್ದೇವೆ. ಇದಲ್ಲದೆ ಹೆಚ್ಚುವರಿಯಾಗಿ. 100 ಕೋಟಿ ಅನುದಾನ ನೀಡಲಾಗುವುದು. ಗಡಿನಾಡಿನ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ಸಂಸ್ಕೃತಿಗಳಿಗೆ ಈ ಅನುದಾನ ಬಳಕೆಯಾಗಲಿದೆ ಎಂದು ತಿಳಿಸಿದರು.

**ಕನ್ನಡ ಕೋರ್ಸ್ :** ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ವಲಸೆ ಬಂದು ನೆಲೆಸಿರುವವರಿಗೆ ಕನ್ನಡ ಕಲಿಸುವ ಅಭಿಯಾನ ಪ್ರಾರಂಭಿಸಲಾಗುವುದು. ವಲಸೆ ಬಂದು ನೆಲೆಸಿದವರು ಇಲ್ಲಿಂದ ಲಾಭ ಪಡೆಯುತ್ತಾರೆ. ಆದರೆ ಕನ್ನಡ ಮಾತ್ರ ಕಲಿಯುವುದಿಲ್ಲ. ಅದಕ್ಕಾಗಿ ಅಧಿಕಾರಿಗಳಿಗೆ ಹೇಗೆ ಕನ್ನಡ ಕಲಿಯಲು ಕಾಲ ಮಿತಿ ನೀಡಿ ಕಲಿಸಲಾಗುತ್ತಿದೆಯೋ ಅದೇ ರೀತಿ ವಲಸೆ ಬಂದ ಹೊರರಾಜ್ಯದವರಿಗೆ ಕನ್ನಡ ಕಲಿಸಲು ಅಭಿಯಾನ ಆರಂಭಿಸಲಾಗುವುದು. ಈ ನಾಡಿನಲ್ಲಿ ನೆಲೆಸಲು ಇಚ್ಛಿಸುವವರು ಕಡ್ಡಾಯವಾಗಿ ಕನ್ನಡ ಕಲಿಯಲೇಬೇಕೆಂಬ ನೀತಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಇಂತಿಷ್ಟುವರ್ಷದಲ್ಲಿ ಕನ್ನಡ ಕಲಿಯಬೇಕು ಎಂಬ ಅಭಿಯಾನ ಪ್ರಾರಂಭಿಸುತ್ತೇವೆ ಎಂದು ಬೊಮ್ಮಾಯಿ ಮಾಹಿತಿ ನೀಡಿದರು.

**ನೀರಾವರಿ ಯೋಜನೆ :** ಕಳಸಾ-ಬಂಡೂರಿ ನಾಲಾ ಜೋಡಣೆಗೆ ಈಗಾಗಲೇ ಕೇಂದ್ರ ಜಲಶಕ್ತಿ ಆಯೋಗದಿಂದ ಅನುಮೋದನೆ ದೊರೆತಿದೆ. ಶೀಘ್ರದಲ್ಲೇ ಯೋಜನೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿಜಲಾಶಯದ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಲು ಶೀಘ್ರವೇ ಅನುಮೋದನೆ ದೊರೆಯಲಿದೆ ಎಂದರು. ಭದ್ರಾ ಮೇಲ್ದಂಡೆ



ಯೋಜನೆಯನ್ನು ಕೇಂದ್ರ ಸರ್ಕಾರ ಶೀಘ್ರ ರಾಷ್ಟ್ರೀಯ ಯೋಜನೆಯಾಗಿ ಘೋಷಿಸುವ ಭರವಸೆ ಇದೆ. ಈ ಘೋಷಣೆಯಾದರೆ .13 ಸಾವಿರ ಕೋಟಿ ಈ ಯೋಜನೆಗೆ ಕೇಂದ್ರದಿಂದ ದೊರೆಯಲಿದೆ. ಇದರಿಂದ 2 ಲಕ್ಷ ಎಕರೆ ಪ್ರದೇಶ ನೀರಾವರಿಗೊಳಪಡಲಿದೆ ಎಂದ ಅವರು, ಇದಲ್ಲದೆ, ಮೇಕೆದಾಟು ಸೇರಿ ಎಲ್ಲ ನೀರಾವರಿ ಯೋಜನೆಗಳಿಗೆ ನಮ್ಮ ಸರ್ಕಾರದಿಂದ ಆದ್ಯತೆ ನೀಡಲಾಗುವುದು. ಪಶ್ಚಿಮ ಘಟ್ಟದ ನದಿ ಸಂಪತ್ತಿನ ಸಂಪೂರ್ಣ ಪ್ರಯೋಜನ ಪಡೆದರೆ ನಾಡು ಇನ್ನಷ್ಟುಶ್ರೀಮಂತವಾಗಲಿದೆ ಎಂದು ನುಡಿದರು.

**ಸಂವಿಧಾನ ರಕ್ಷಣೆ :** ಎಲ್ಲ ಮಾತೃ ಭಾಷೆಗಳಿಗೆ ಸಂವಿಧಾನದ ರಕ್ಷಣೆ ನೀಡುವ ಅಗತ್ಯವಿದೆ. ಪ್ರಾಥಮಿಕ ಹಂತದ ಶಾಲಾ ಶಿಕ್ಷಣ ಮಾತೃಭಾಷೆಯಲ್ಲೇ ಆಗಬೇಕು ಎಂಬ ವಾದ ನ್ಯಾಯಾಲಯದಲ್ಲಿ ವಿಫಲವಾಗುತ್ತಿದೆ. ಬರುವ ದಿನಗಳಲ್ಲಿ ಸಂವಿಧಾನ ರಕ್ಷಣೆ ಪಡೆಯಲು ಶ್ರಮಿಸಲಾಗುವುದು. ಈ ನಿಟ್ಟಿನಲ್ಲಿ ಕೇಂದ್ರದ ಮೇಲೆ ಒತ್ತಡ ಹೇರುವ ಕೆಲಸ ಮಾಡಲಾಗುವುದು ಎಂದರು.

ತಾಯಿ ಕನ್ನಡ ಭುವನೇಶ್ವರಿಯ ಒಡಲು ಶ್ರೀಮಂತವಾದುದು. ಇಲ್ಲಿನ ಜ್ಞಾನ, ಸಾಹಿತ್ಯ, ತಂತ್ರಜ್ಞಾನ ಎಲ್ಲವೂ ಸಿರಿವಂತವಾಗಿದೆ. ಕನ್ನಡ ಭಾಷೆಯಲ್ಲಿ ಸ್ಪಷ್ಟತೆ, ನಿಖರತೆ, ಪ್ರಖರತೆಗಳಿವೆ. ಕನ್ನಡದ ಮನಸ್ಸುಗಳು ಸ್ವಚ್ಛ ಹಾಗೂ ಪಾರದರ್ಶಕವಾಗಿವೆ. ಮೆದುಳಿನಿಂದ ಬಂದ ಮಾತು ಬರೀ ಮಾತಾಗುತ್ತದೆ. ಆದರೆ ಹೃದಯದಿಂದ ಬಂದ ಮಾತು ಸತ್ಯದರ್ಶನವಾಗುತ್ತದೆ. ಹೀಗೆ ಕನ್ನಡ ಸಾಹಿತ್ಯವೆಲ್ಲ ಹೃದಯದಿಂದ ಬಂದಿರುವಂತಹದ್ದು. ಹೀಗಾಗಿ ಇಲ್ಲಿ ಸತ್ಯದರ್ಶನವಾಗಿದೆ. ಕನ್ನಡ ಭಾಷೆಗೆ ಉಜ್ವಲ ಭವಿಷ್ಯವಿದೆ. ಕಾಲಕಾಲಕ್ಕೆ ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಮುಂದೆ ಸಾಗುತ್ತಿದೆ ಎಂದು ತಿಳಿಸಿದರು.

ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ವಿಶ್ರಾಂತ ಕುಲಪತಿ ಡಾ.ಬಿ.ಎ.ವಿವೇಕ ರೈ, ಜಿಲ್ಲಾ ಉಸ್ತುವಾರಿ ಸಚಿವ ಅರೆಬೈಲು ಶಿವರಾಮ ಹೆಬ್ಬಾರ್, ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ, ಸಚಿವರಾದ ಬಿ.ಸಿ.ಪಾಟೀಲ, ಬಿ.ಸಿ.ನಾಗೇಶ್, ಸಂಸದ ಶಿವಕುಮಾರ್ ಉದಾಸಿ ಇತರೆ ಗಣ್ಯರು ಭಾಗವಹಿಸಿದ್ದರು.


# ಶತಮಾನ ಸನಿಹದಲ್ಲಿ ಸಹಕಾರ ಸಂಘ : ಸದಸ್ಯರುಗಳ ಆರ್ಥಿಕ ಸ್ವಾವಲಂಬನೆಯ ಪೂರಕ – ಪ್ರೇರಕ ಅರಸೀಕೆರೆಯ ಆರ್ಯವೈಶ್ಯ ಕೋ–ಆಪರೇಟಿವ್ ಸೊಸೈಟಿ ಲಿ.,

20ನೇ ಶತಮಾನದ ಆರಂಭದ ದಿನಗಳವು ಸ್ವಾತಂತ್ರ್ಯ ಪೂರ್ವದ ದಿನಗಳು. ಶತಮಾನದ ಪ್ರಾರಂಭದಲ್ಲಿ ಹೊಸ ಆಲೋಚನೆಗಳು, ಅಪೇಕ್ಷೆಗಳು, ಅವಶ್ಯಕತೆಗಳು ಉದ್ಭವಿಸಿ ಹೊಸ ರೂಪ ತಳೆಯುತ್ತಿದ್ದ ಸಮಯ. ಅದೇ ಸಂದರ್ಭ ಆರ್ಯ ವೈಶ್ಯ ಜನಾಂಗದ ಮುಖ್ಯಸ್ಥರಲ್ಲೂ ಆಲೋಚನೆ ಹೊಮ್ಮಿ ಆ ದಿಕ್ಕಿನಲ್ಲಿ ಪ್ರಯತ್ನ ಪ್ರಾರಂಭವಾಗಿ ಅದಕ್ಕೆ ಕೊಟ್ಟ ರೂಪವೇ ಸಹಕಾರಿ ಸಂಘದ ಉಗಮಕ್ಕೆ ನಾಂದಿಯಾಯಿತು. ಅಂದಿನ ಅವರ ದೂರದರ್ಶಿತ್ವ ಮತ್ತು ಅವಿರತ ಪರಿಶ್ರಮದಿಂದ ಇಂದು ಆರ್ಯವೈಶ್ಯ ಸಮಾಜದ ಸದಸ್ಯರು ಆರ್ಥಿಕವಾಗಿ ಸದೃಢವಾಗಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

1924–25 ಸಾಲಿನಲ್ಲಿ ದಿನಾಂಕ : 18–04–1924ರಂದು ಅರಸೀಕೆರೆಯ ಆರ್ಯವೈಶ್ಯ ಸಹಕಾರ ಸಂಘವು ಅರಕಲಗೂಡು ಎ.ವಿ ನಂಜುಂಡಶ್ರೇಷ್ಠಿರವರ ಮಾರ್ಗದರ್ಶನದಲ್ಲಿ ಪ್ರಾರಂಭಗೊಂಡು ಅಪಾರ ಜನಮನ್ನಣೆ ಗಳಿಸಿ ಎಲ್ಲರ ವಿಶ್ವಾಸ ಪ್ರೀತಿ ಗೌರವಗಳಿಗೆ ಪಾತ್ರವಾಗಿರುತ್ತದೆ. ಹಲವಾರು ಪ್ರಮುಖ ಸಹಕಾರಿ ಮುಖಂಡರುಗಳ ಹಿರಿಯರ ನೇತೃತ್ವದಲ್ಲಿ ಅಲ್ಪ ಬಂಡವಾಳದೊಂದಿಗೆ ಆರಂಭಗೊಂಡು ಇದೀಗ 98 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಸಂಘದ ಕಾರ್ಯ ಕಲಾಪಗಳು ಪರಿವರ್ತನೆ ಹೊಂದಿ ಹೊಸ ಯೋಜನೆಗಳು ರೂಪುಗೊಂಡು ಪ್ರಗತಿ ಪಥದತ್ತ ಸಾಗುತ್ತಾ ಬಂದಿದೆ. ಯುವ ಸಮೂಹವೇ ಆಡಳಿತವನ್ನು ನಡೆಸುತ್ತಾ ಪ್ರಗತಿಯ ಹಾದಿಯಲ್ಲಿ ಸಂಸ್ಥೆಯನ್ನು ಮುನ್ನಡೆಸಿದ್ದಾರೆ. ಸಂಘವು ತನ್ನದೇ ಆದ ಸ್ವಂತ ಸಂಪನ್ಮೂಲಗಳಿಂದ ಅಭಿವೃದ್ಧಿ ಹೊಂದಿ ಪ್ಲಾಟಿನಂ ಜ್ಯೂಬಿಲಿ ಹಾಲ್ ನಿರ್ಮಿಸಿ ಸಂಘವು ಇಂದು ಇಲ್ಲಿಯೇ ತನ್ನದೇ ಆದ ಸ್ವಂತ ಕಟ್ಟಡದಲ್ಲಿ ಕಾರ್ಯಕಲಾಪ ವ್ಯವಹಾರಗಳನ್ನು ನಡೆಸುತ್ತಲಿದೆ, ಹಾಗೆ ಮುಂದುವರೆದ ಸಹಕಾರದಿಂದ ಸಂಘವು ಒಟ್ಟು 14 ಅಂಗಡಿ ಮಳಿಗೆಗಳನ್ನು ನಿರ್ಮಿಸಿ ಅವುಗಳನ್ನು ಬಾಡಿಗೆಗೆ ಕೊಟ್ಟು ಅವುಗಳಿಂದ ಶಾಶ್ವತವಾದ ವರಮಾನವನ್ನು ಗಳಿಸುತ್ತಲಿದೆ. ಕೇವಲ 37 ಸದಸ್ಯರುಗಳಿಂದ ರೂ 590 ಗಳ ಷೇರುಬಂಡವಾಳದೊಂದಿಗೆ ಪ್ರಾರಂಭಗೊಂಡ ಸಂಸ್ಥೆ ಪ್ರಸ್ತುತ 1378 ಸದಸ್ಯರುಗಳನ್ನು ಹೊಂದಿ ರೂ 1,69,40,000=00ಗಳ ಷೇರು ಬಂಡವಾಳ ಹೊಂದಿರುತ್ತದೆ. ಆರಂಭದಿಂದಲೂ ಲಾಭಾಂಶ ವಿತರಿಸುತ್ತಾ ಪ್ರಸ್ತುತ ಶೇಕಡ 20ರವರೆಗೆ ಡಿವಿಡೆಂಡ್ ನೀಡಲಾಗಿರುತ್ತದೆ.

2004–2005 ರಲ್ಲಿ ಅರಸೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಸಹಕಾರಿ ವಲಯದಲ್ಲಿಯೇ ಪ್ರಪ್ರಥಮವಾಗಿ ಗಣಕೀಕೃತಗೊಂಡ ಹಣಕಾಸು ಸಂಸ್ಥೆಯೆಂಬ ಹೆಗ್ಗಳಿಕೆಗೆ ಸಂಘವು ಪಾತ್ರವಾಗಿರುವುದಲ್ಲದೆ, ಲೆಕ್ಕಪತ್ರಗಳ ನಿರ್ವಹಣೆಯನ್ನು ಕಂಪ್ಯೂಟರ್ ಮೂಲಕವೇ ಮಾಡಲಾಗುತ್ತಿದೆ, ಹಾಗೂ 2009–2010ನೇ ಸಾಲಿನಿಂದ ವಾಸವಿ ಡೆಪಾಸಿಟ್ (ಪಿಗ್ಮಿ)



ಹಣದ ಸಂಗ್ರಹಣೆಯನ್ನು ಪಿಗ್ಮಿಮಿಷನ್ ಬಳಸಿ ಮಾಡಲಾಗುತ್ತಿದೆ. ಇದನ್ನು ಅರಸೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಸಹಕಾರಿ ವಲಯದಲ್ಲಿಯೇ ಕಾರ್ಯಾಚರಣೆಗೆ ತಂದ ಪ್ರಪ್ರಥಮ ಸಂಘ ಇದಾಗಿದೆ. ಪ್ರಸ್ತುತ ರೂ. 37 ಕೋಟಿ ವಹಿವಾಟು ನಡೆಸುವುದರ ಮೂಲಕ ರೂ. 18 ಕೋಟಿ ಒಟ್ಟು ಕೂಡಿಸಿ ದಾಖಲೆಯ ದುಡಿಯುವ ಬಂಡವಾಳ ಹೊಂದಿರುವ ಸ್ವಾವಲಂಬಿ ಸಹಕಾರಿ ಸಂಘವಾಗಿ ಬೆಳೆದಿದೆ. ಸಂಘವು ಕೇವಲ ಆರ್ಥಿಕ ಅಭಿವೃದ್ಧಿಗಾಗಿ ಮಾತ್ರ ತನ್ನ ಸೂತ್ರವನ್ನು ಮೀಸಲಿಡಲಾಗಿದೆ. ವಿವಿಧ ನಿಧಿಗಳ ಮೂಲಕ ಅಗತ್ಯವಿದ್ದಾಗ ಸದಸ್ಯರುಗಳಿಗೆ ಅವರ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸಲು ಆರ್ಥಿಕವಾಗಿ ಧನ ಸಹಾಯ ಮಾಡುತ್ತಿದೆ.

**ಸಂಘದ ಸಾಮಾಜಿಕ ಕಾರ್ಯಚಟುವಟಿಕೆಗಳು**

- ಎ.ವಿ. ನಂಜುಡಶ್ರೇಷ್ಠಿ (AVN) ವಿಧ್ಯಾನಿಧಿ ಹಾಗೂ ವಿಧ್ಯಾನಿಧಿ ಬಡ್ಡಿಯಿಂದ ಅರಸೀಕೆರೆ ಹಾಗೂ ಹಾರನಳ್ಳಿ ಗ್ರಾಮದ ಆರ್ಥಿಕವಾಗಿ ಹಿಂದುಳಿದ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿ ವೇತನ ನೀಡಲಾಗುತ್ತಿದೆ.
- ಹಾಸನ ಜಿಲ್ಲೆ, ಅರಸೀಕೆರೆ ನಗರದಲ್ಲಿ ನಡೆಯುತ್ತಿರುವ ಸೇವಾಸಂಕಲ್ಪ ವಿಧ್ಯಾ ಸಂಸ್ಥೆ ರಿ.ಅರಸೀಕೆರೆ–573103 ಹಿರಿಯ ಪ್ರಾಥಮಿಕ ಶಾಲೆರವರು ಪ್ರಾರಂಭಿಸಿರುವ ದತ್ತು ಯೋಜನೆಯಡಿಯಲ್ಲಿ ಪ್ರತೀ ವರ್ಷ 3 ಮಕ್ಕಳನ್ನು ದತ್ತು ಪಡೆದು ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ವರ್ಷದ ಶಾಲಾ ಖರ್ಚು ವೆಚ್ಚವನ್ನು ಸಂಘದ ವತಿಯಿಂದ ಭರಿಸಲಾಗುತ್ತಿದೆ.
- ಸದಸ್ಯರ ಬೇಡಿಕೆಗನುಸಾರವಾಗಿ ಸದಸ್ಯರ ಮಕ್ಕಳ ವಿಧ್ಯಾಭ್ಯಾಸದ ಖರ್ಚು ವೆಚ್ಚಗಳನ್ನು ನಗದು/ಸ್ಟೇಷನರಿ ಸಾಮಾಗ್ರಿಗಳು/ಶಾಲಾ ಶುಲ್ಕದ ರೂಪದಲ್ಲಿ ಸಂಘದ ವತಿಯಿಂದ ವ್ಯವಸ್ಥೆ ಮಾಡಲಾಗುತ್ತಿದೆ.
- ಸಂಘದ ಆರ್ಥಿಕವಾಗಿ ಹಿಂದುಳಿದ ಸದಸ್ಯರು ಮತ್ತು ಕುಟುಂಬ ವರ್ಗದವರಿಗೆ ಸದಸ್ಯರ ಬೇಡಿಕೆಗನುಸಾರವಾಗಿ ಮದುವೆ



**ಕೆ.ಆರ್. ಮುರಳೀಧರ್**
ಅಧ್ಯಕ್ಷರು



**ಕೆ.ಜಿ. ಅರುಣ್ ಕುಮಾರ್**
ಉಪಾಧ್ಯಕ್ಷರು



**ಕೆ.ಜಿ. ವಾಸವಾಂಬ**
ವ್ಯವಸ್ಥಾಪಕರು

ಸಮಾರಂಭಕ್ಕಾಗಿ ನಗದು ಅಥವಾ ಸಾಮಾಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

- ಸಂಘದ ಸದಸ್ಯರ ಅನುಕೂಲಕ್ಕಾಗಿ ಸಂಘದಲ್ಲಿ ಒಂದು ಆರೋಗ್ಯ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ.
- ಸಂಘದ ಸದಸ್ಯರ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆಯುವಂತೆ ಪ್ರೋತ್ಸಾಹಿಸಲು, ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಆರ್ಥಿಕ ಸಹಾಯ ಮಾಡಲು. ಪ್ರತಿಭಾ ಪುರಸ್ಕಾರ ಮಾಡಲು, ಹಿರಿಯ ನಾಗರೀಕರನ್ನು ಸನ್ಮಾನಿಸಲು, ಸಹಕಾರ ಸಪ್ತಾಹಗಳನ್ನು ಆಚರಿಸಲು ಸಾಂಸ್ಕೃತಿಕ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಲು ಆರ್ಥಿಕವಾಗಿ ಧನ ಸಹಾಯದ ವ್ಯವಸ್ಥೆ ಮಾಡುವ ಸದುದ್ದೇಶದಿಂದ ಸಂಘದಲ್ಲಿ ವಿದ್ಯಾನಿಧಿ/ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಲ್ಯಾಣ ನಿಧಿಯನ್ನು ಸೃಜಿಸಲಾಗಿದೆ. ಧನ ವಿನಿಯೋಗಕ್ಕಾಗಿ ಈ ನಿಧಿಯು ಸಂಘ ಪ್ರತೀ ವರ್ಷ ಲಾಭಾಂಶ ವಿಂಗಡಣೆಯಿಂದ ತೆಗೆದಿಟ್ಟ ಮೊಬಲಗನ್ನು ಒಳಗೊಂಡಿರುತ್ತದೆ.
- ಸದಸ್ಯರು ಆರ್ಥಿಕವಾಗಿ ಅಭಿವೃದ್ಧಿಹೊಂದಲು, ಉದ್ಯೋಗ ಮತ್ತು ಸ್ವಂತ ಉದ್ಯೋಗದ ಬೆಳವಣಿಗೆಗೆ ಪ್ರೋತ್ಸಾಹ ನೀಡಲು, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ, ವ್ಯಾಪಾರ ಮತ್ತು ವಾಣಿಜ್ಯಾಭಿವೃದ್ಧಿಗಾಗಿ, ಹೊಚ್ಚ ಹೊಸ ವಾಹನಗಳನ್ನು ಕೊಳ್ಳಲು, ಕಟ್ಟಡ, ಮನೆ, ನಿವೇಶನ ಅಥವಾ ಬೇರೆ ಸ್ಥಿರ ಆಸ್ತಿಗಳನ್ನು ಕೊಳ್ಳಲು ಮತ್ತು ರಿಪೇರಿ ಮಾಡಲು ಮತ್ತು ಶುಭ ಕಾರ್ಯಗಳಿಗಾಗಿ ಸಂಘವು ಸದಸ್ಯರುಗಳಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿದೆ.

**ಆರ್ಯ ಫಿಕ್ಸೆಡ್ ಡೆಪಾಸಿಟ್ (A.F.D) :** ಸಂಘದಲ್ಲಿ ರೂ 1,000=00 ದಷ್ಟು ಮೌಲ್ಯದ ನಿರಖು ಠೇವಣಿಯ ವ್ಯವಹಾರ ನಡೆಸಲು ಒಪ್ಪುವ ಸದಸ್ಯರಿಂದ, ಮೊಬಲಗನ್ನು ಆರ್ಯ ಫಿಕ್ಸೆಡ್ ಡೆಪಾಜಿಟ್ (A.F.D) ಯೋಜನೆಯಡಿ ತೊಡಗಿಸಿಕೊಂಡು ಸದಸ್ಯನು ಸಂಘದಲ್ಲಿ ಪ್ರತೀ ವರ್ಷ ನಡೆಸಬೇಕಾಗಿರುವ ಕನಿಷ್ಠ ವ್ಯವಹಾರ ಮಾಡಿದ್ದಕ್ಕೆ ಸಾಕ್ಷಿಯಾಗಿ ಈ ಡೆಪಾಜಿಟನ್ನು ಪರಿಗಣಿಸಲಾಗುವುದು.

**ಸೌಭಾಗ್ಯ ಡೆಪಾಸಿಟ್ :** ಸಂಘದ ಸದಸ್ಯರ ಹೆಣ್ಣು ಮಕ್ಕಳಿಗೆ ಸದಸ್ಯರ ಪರವಾಗಿ ಗೌರಿ ಹಬ್ಬದ ಪ್ರಯುಕ್ತ ಮಂಗಳದ್ರವ್ಯಗಳಿಗಾಗಿ ಹಣವನ್ನು ಕಳುಹಿಸಿಕೊಡುವ ಯೋಜನೆ. "ವಿವಾಹಿತ ಮಹಿಳಾ ಸದಸ್ಯರು"ಗಳ ಅನುಕೂಲಕ್ಕಾಗಿ ಮಾತ್ರವೇ ಇರುವ ಈ "ಸೌಭಾಗ್ಯ ಡೆಪಾಜಿಟ್" ಯೋಜನೆಯಡಿ ಸದಸ್ಯರು ತೊಡಗಿಸಬೇಕಾದ ಮೊತ್ತ ಕನಿಷ್ಠ ರೂ 100=00 ರಿಂದ ಗರಿಷ್ಠ 10,000=00 ದವರೆಗೆ ಮಾತ್ರ. ಈ ಡೆಪಾಜಿಟ್ ಹಣಕ್ಕೆ ಸಾಲಿಯಾನ 12% ರಂತೆ ನೀಡುವ ಬಡ್ಡಿಯನ್ನು ಪ್ರತೀ ವರ್ಷಕ್ಕೊಮ್ಮೆ ಗೌರಿ ಹಬ್ಬಕ್ಕೆ ಮುಂಚಿತವಾಗಿ ವಾರ್ಷಿಕ ಬಡ್ಡಿಯನ್ನು ಡೆಪಾಜಿಟ್‌ದಾರರು

**ಸಂಘದಿಂದ ಸದಸ್ಯರುಗಳಿಗೆ ನೀಡುತ್ತಿರುವ ಸೌಲಭ್ಯಗಳು**

- ಗರಿಷ್ಠ 20,000=00 ರೂಗಳ ವರೆಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಜಂಟಿ ಜವಾಬ್ದಾರಿಯೊಂದಿಗೆ ಶೇಕಡಾ 6 ರಂತೆ ಆರ್ಥಿಕವಾಗಿ ಹಿಂದುಳಿದ ಸಂಘದ ಹಕ್ಕುಳ್ಳ ಸದಸ್ಯರುಗಳಿಗೆ ಮಾತ್ರ "ಜಂಟಿ ಕಂತು ಸಾಲ" ನೀಡಲಾಗುತ್ತಿದೆ.
- ಗರಿಷ್ಠ 5,00,000=00 ರೂಗಳ ವರೆಗೆ ಶೇಕಡಾ 11 ರ ಬಡ್ಡಿ ದರದಲ್ಲಿ ಜಂಟಿ ಜವಾಬ್ದಾರಿಯೊಂದಿಗೆ ಭದ್ರತೆಗಳನ್ನು ಪಡೆದು ಸಂಘದ ಹಕ್ಕುಳ್ಳ ಸದಸ್ಯರುಗಳಿಗೆ ಮಾತ್ರ "ವಿಶೇಷ ಕಂತು ಸಾಲ" ನೀಡಲಾಗುತ್ತಿದೆ.
- ಗರಿಷ್ಠ 15,00,000=00 ರೂಗಳ ವರೆಗೆ ಶೇಕಡಾ 12ರ ಬಡ್ಡಿದರದಲ್ಲಿ ಸಂಘದ ಹಕ್ಕುಳ್ಳ ಸದಸ್ಯರುಗಳಿಗೆ ಮಾತ್ರ ಹೈಪಾತಿಕೇಷನ್ ಆಧಾರದ ಮೇಲೆ "ವಾಹನಾಧಾರಿತ ಜಂಟಿ ಸಾಲ" ನೀಡಲಾಗುತ್ತಿದೆ.
- ಗರಿಷ್ಠ ಮಿತಿ ಇಲ್ಲದೆ ಸಂಘದ ಸದಸ್ಯರುಗಳಿಗೆ ಶೇಕಡಾ 10ರ ಬಡ್ಡಿದರದಲ್ಲಿ "ಸ್ವರ್ಣಾಭರಣ ಸಾಲದ" ಸೌಲಭ್ಯವನ್ನು ನೀಡಲಾಗುತ್ತಿದೆ. ಮತ್ತು 2014–2015 ನೇ ಸಾಲಿನಿಂದ ಸೇಫ್ ಲಾಕರ್ ವ್ಯವಸ್ಥೆಯನ್ನು ಸಹ ಸಂಘವು ಹೊಂದಿರುತ್ತದೆ.
- ಗರಿಷ್ಠ ರೂ. 75,00,000=00 ಗಳವರೆಗೆ ಶೇಕಡಾ 12ರ ಬಡ್ಡಿ ದರದಲ್ಲಿ ಸಂಘದ ಸದಸ್ಯರುಗಳಿಗೆ ಸ್ಥಿರಾಸ್ತಿ ಆಧಾರದ ಮೇಲೆ "ಡೆಪಾಜಿಟ್ ಆಫ್ ಟೈಟಲ್ ಡೀಡ್ ಸಾಲ" ನೀಡಲಾಗುತ್ತಿದೆ.
- ಗರಿಷ್ಠ ರೂ. 25,00,000=00 ಗಳವರೆಗೆ ಶೇಕಡಾ 10ರ ಬಡ್ಡಿ ದರದಲ್ಲಿ ಸಂಘದ ಸದಸ್ಯರುಗಳಿಗೆ ಸ್ಥಿರಾಸ್ತಿ ಆಧಾರದ ಓವರ್ ಡ್ರಾಫ್ಟ್ ಸಾಲ ನೀಡಲಾಗುತ್ತಿದೆ.

**ಸಂಘಕ್ಕೆ ಸಂದ ಪ್ರಶಸ್ತಿ – ಗೌರವಗಳು :**

- ಸಂಘವು 1979–80ರಲ್ಲಿ ಸಹಕಾರ ಇಲಾಖೆಯಿಂದ ಅತ್ಯುತ್ತಮ ಸಹಕಾರ ಸಂಘವೆಂಬ ಪ್ರಶಸ್ತಿಯನ್ನೂ ಪಡೆದಿರುತ್ತದೆ.
- ಸಂಘಕ್ಕೆ 1981–82ರಲ್ಲಿ ಆರ್ಯವೈಶ್ಯ ಸಹಕಾರ ಮಹಾಮಂಡಳದಿಂದ ಪರ್ಯಾಯ ಪಾರಿತೋಶಕ ಲಭಿಸಿರುತ್ತದೆ.
- 1995–96 ರಲ್ಲಿ ಸಹಕಾರ ಇಲಾಖೆಯಿಂದ ಅತ್ಯುತ್ತಮ ಸಹಕಾರಿ ಸಂಘವೆಂದು ಘೋಷಣೆ ಪಡೆದು ಪ್ರಶಂಸೆಗೆ ಒಳಪಟ್ಟು 1 ಲಕ್ಷ ರೂಪಾಯಿಗಳನ್ನು ಪ್ರೋತ್ಸಾಹ ಧನವಾಗಿ ಸಂಘವು ಪಡೆದಿರುತ್ತದೆ.
- ಸಂಘಕ್ಕೆ 2011–2012ರಲ್ಲಿ ಸಹಕಾರ ಇಲಾಖೆಯಿಂದ ತಾಲ್ಲೂಕಿನ ಅತ್ಯುತ್ತಮ ಸಹಕಾರಿ ಸಂಘವೆಂದು ನಮ್ಮ ಸಂಘವನ್ನು ಗುರುತಿಸಿ ಇದೇ ಪ್ರಥಮ ಬಾರಿಗೆ ಸಂಘದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕರಿಬ್ಬರಿಗೂ ಸನ್ಮಾನಿಸಿರುತ್ತಾರೆ, ಕರ್ನಾಟಕ ಸರ್ಕಾರ/ಸಹಕಾರ ಇಲಾಖೆ ವತಿಯಿಂದ ಸಂಘವು ನೆನಪಿನ ಕಾಣಿಕೆಯನ್ನು ಪಡೆದಿರುತ್ತದೆ.
- ಸಂಘಕ್ಕೆ 2019–2020 ರಲ್ಲಿ ಸಹಕಾರ ಇಲಾಖೆಯಿಂದ ತಾಲ್ಲೂಕಿನ ಅತ್ಯುತ್ತಮ ಸಹಕಾರಿ ಸಂಘವೆಂದು ನಮ್ಮ ಸಂಘವನ್ನು ಗುರುತಿಸಿ ಸಂಘದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕರಿಬ್ಬರಿಗೂ ಸನ್ಮಾನಿಸಿ ಸಂಘಕ್ಕೆ ಕರ್ನಾಟಕ ಸರ್ಕಾರ/ಸಹಕಾರ ಇಲಾಖೆ ಸಂಘಕ್ಕೆ ನೆನಪಿನ ಕಾಣಿಕೆ ನೀಡಿ ಗೌರವಿಸಿರುತ್ತಾರೆ.

ಸೂಚಿಸುವವರ ಬ್ಯಾಂಕ್ ಖಾತೆಗೆ ಸಂಘದ ವತಿಯಿಂದ "ನೆಟ್ ಬ್ಯಾಂಕ್ ಮೂಲಕ" ನೆಫ್ಟ್ ಮುಖೇನ ಜಮೆ ಮಾಡಲಾಗುವುದು.

**ಸಿಂಧೂರ ಡೆಪಾಸಿಟ್ :** ಸಂಘದ "ವಿವಾಹಿತ ಮಹಿಳಾ ಸದಸ್ಯರು"ಗಳ ಅನುಕೂಲಕ್ಕಾಗಿ ಮಾತ್ರವೇ "ಸಿಂಧೂರ ಡೆಪಾಜಿಟ್" ಅನ್ನು ಆರಂಭಿಸಿದ್ದು, ಈ ಡೆಪಾಜಿಟ್ ಯೋಜನೆಯಡಿಯಲ್ಲಿ ಸದಸ್ಯರು ಕನಿಷ್ಠ ರೂ 100=00 ರಿಂದ ಗರಿಷ್ಠ 10,000=00 ದವರೆಗೆ ಮಾತ್ರ. ತೊಡಗಿಸಿದರೆ ಈ ಡೆಪಾಜಿಟ್ ಹಣಕ್ಕೆ ಸಾಲಿಯಾನ 12% ರಂತೆ ನೀಡುವ ಬಡ್ಡಿಯನ್ನು ಪ್ರತೀವರ್ಷಕ್ಕೊಮ್ಮೆ ಗೌರಿಹಬ್ಬಕ್ಕೆ ಮುಂಚಿತವಾಗಿ ಮಂಗಳದ್ರವ್ಯಗಳಿಗಾಗಿ ವಾರ್ಷಿಕ ಬಡ್ಡಿಯನ್ನು ಡೆಪಾಜಿಟ್‌ದಾರರು ಸಂಘದಲ್ಲಿ ಹೊಂದಿರುವ ಉಳಿತಾಯಖಾತೆಗೆ ವರ್ಗಾವಣೆ ಮಾಡುವುದರ ಮೂಲಕ ಜಮೆ ಮಾಡಲಾಗುವುದು.

**ವಾಸವಿ ಡೆಪಾಸಿಟ್ (ಪಿಗ್ಮಿ ಖಾತೆ) :** ಸದಸ್ಯರಿಗೆ ಹೆಚ್ಚಿನ ಅನುಕೂಲ ವಾಗಲೆಂದು ಆರಂಭಿಸಿರುವ ವಾಸವಿ ಡೆಪಾಜಿಟ್ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಡಿಪಾಜಿಟ್‌ದಾರನು ಪ್ರತೀ ದಿನವೂ ಕನಿಷ್ಟ 1 ರೂ. ಗೆ ಕಡಿಮೆ ಇಲ್ಲದಂತೆ ಮಾಸಿಕ ಒಟ್ಟು 18000/ ರೂಗಳಿಗೆ ಮೀರದಂತೆ ವಾರ್ಷಿಕ ರೂ 2,16,000=00 ದವರೆಗೆ ಡೆಪಾಸಿಟ್ ಮಾಡುತ್ತಾ ಬರಬಹುದು. ಒಂದು ವರ್ಷ ಪೂರ್ಣವಾದ ಡೆಪಾಸಿಟ್ ಹಣಕ್ಕೆ ಮಾತ್ರ ಶೇ.4ರಂತೆ ಬಡ್ಡಿ ನೀಡಲಾಗುತ್ತಿದೆ.

**ಸದಸ್ಯರ ಉಳಿತಾಯ ಖಾತೆ :** ಸಂಘದ ಸದಸ್ಯರುಗಳಿಗೆ ಪರಸ್ಪರ ಸಹಕಾರ, ಸ್ವ ಸಹಾಯ, ಮಿತವ್ಯಯಬುದ್ಧಿ, ಅನ್ಯೋನ್ಯ ಸಹಾಯ ಗುಣ ಮತ್ತು ಉಳಿತಾಯ ಮನೋಭಾವನೆಗಳ ಬಗ್ಗೆ ತಿಳುವಳಿಕೆ ನೀಡಲು ಮತ್ತು ಅವರಲ್ಲಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲು ಹಾಗೂ ಅವುಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡಲು, ಹಾಗೂ ವ್ಯವಹಾರದ ಅನುಕೂಲಕ್ಕಾಗಿ ಸಂಘದ ಪ್ರತಿಯೊಬ್ಬ ಸದಸ್ಯನು ಸಂಘದಲ್ಲಿ ಸದಸ್ಯರ ಉಳಿತಾಯ ಖಾತೆಯನ್ನು ತೆರೆಯುವು ಕಡ್ಡಾಯವಾಗಿರುತ್ತದೆ.

ಸಂಘವು ಈಗಾಗಲೇ, 1.) 1949–ರಲ್ಲಿ ರಜತ ಮಹೋತ್ಸವ, 2) 1974–ರಲ್ಲಿ ಸುವರ್ಣ ಮಹೋತ್ಸವ, 3) 1986 ರಲ್ಲಿ ವಜ್ರಮಹೋತ್ಸವ ಹಾಗೂ 4) 1999 ರಲ್ಲಿ ಅಮೃತ ಮಹೋತ್ಸವ, 5) 2014 ರಲ್ಲಿ ನವಪಿಹಿ ಮಹೋತ್ಸವವನ್ನು ಆಚರಿಸಿ ಇದೀಗ ತನ್ನದೇ ಆದ ಸ್ವಂತ ಶಕ್ತಿಯಿಂದ ಅಭಿವೃದ್ಧಿ ಹೊಂದುತ್ತಾ ಶತಮಾನೋತ್ಸವ ಆಚರಿಸಲು ಸಜ್ಜಾಗುತ್ತಿದೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಮತ್ತು ಷೇರುದಾರರು ನಡೆಸುವ ಶುಭ ಸಮಾರಂಭಗಳಿಗೆ ಒಂದು ಸಭಾಂಗಣವು ಸಂಘಕ್ಕೆ ಅತೀ ಅವಶ್ಯಕವಾಗಿ ಬೇಕಾಗಿರುವುದರಿಂದ ಮತ್ತು ಶತಮಾನೋತ್ಸವದ ಸವಿನೆನಪಿಗಾಗಿ ಒಂದು "ಶತಮಾನೋತ್ಸವ ಭವನ" ನಿರ್ಮಿಸಬೇಕೆನ್ನುವ ಸದುದ್ದೇಶವನ್ನು ಸಂಘವು ಹೊಂದಿದೆ.

**ಅಧ್ಯಕ್ಷರ ಮಾತು :** ಯಾವುದೇ ಸಂಘ 98 ವರ್ಷಗಳ ದಾರಿ ಸವೆಸಿ ಮುಂದೆ ಸಾಗಬೇಕಾದರೆ ಅದರ ಹಿಂದೆ ಬಹಳಷ್ಟು ಮಹನೀಯರುಗಳ ನಿಸ್ವಾರ್ಥ ಸೇವೆ ಹಾಗೂ ಅವರುಗಳು ಈ ಸಂಘಕ್ಕಾಗಿ ಮಾಡಿದ ಪರಿಶ್ರಮಗಳೇ ಇಂದಿನ ಪ್ರತಿಫಲ ಎನ್ನಬಹುದು. ಈ ಹಿಂದೆ ನಡೆದು ಬಂದ ದಾರಿ ಕಿರಿದಾಗಿದ್ದರು, ಸಂಘದ ಅಭಿವೃದ್ಧಿಗೆ ಕುಲದೇವತೆಯಾದ ಜಗನ್ಮಾತೆ ಶ್ರೀ ಕನ್ಯಕಾ ಪರಮೇಶ್ವರಿಯ ಅನುಗ್ರಹ, ಸಹಕಾರಿ ಬಂಧುಗಳ ವಿಶಾಲ ಸಹಕಾರಿ ಮನೋಭಾವ ಪ್ರೋತ್ಸಾಹ ಹಾಗೂ ಸಂಘದ ಏಳಿಗೆಗಾಗಿ ಶ್ರಮಿಸಿರುವ/ ಶ್ರಮಿಸುತ್ತಿರುವ ಅಂದು/ಇಂದಿನ ಗೌರವಾನ್ವಿತ ಪದಾಧಿಕಾರಿಗಳು, ನಿರ್ದೇಶಕ ಮಂಡಳಿಯವರ ಸಾಮರಸ್ಯ, ಸಹಕಾರ, ದಕ್ಷ ಆಡಳಿತ, ನಿಸ್ವಾರ್ಥ ಸೇವೆ ಮತ್ತು ಸಹಕಾರಿ ತತ್ವವನ್ನು ನಿಜವಾಗಿ ಅನುಷ್ಠಾನಗೊಳಿಸುವ ಸಂಘದ ಪ್ರಾಮಾಣಿಕ ಹಾಗೂ ಉತ್ಸಾಹಿ ಸಿಬ್ಬಂದಿ ವರ್ಗದವರ ಪರಿಶ್ರಮದಿಂದ ಸಂಘವು ಇಂದು ಭದ್ರವಾದ ಬುನಾದಿಯ ಮೇಲೆ ಸ್ವಾವಲಂಭಿಯಾಗಿ ತಲೆಯೆತ್ತಿ ನಿಂತಿದೆ ಎಂದು ಸಂಘದ ಆದ್ಯಕ್ಷರು ಹರ್ಷ ವ್ಯಕ್ತಪಡಿಸಿದರು.

**ಆಡಳಿತ ಮಂಡಳಿ ಸದಸ್ಯರುಗಳು**

**ಕೆ.ಆರ್ ಮುರಳೀಧರ್ – ಅಧ್ಯಕ್ಷರು**

**ಕೆ.ಜಿ ಅರುಣ್ ಕುಮಾರ್ – ಉಪಾಧ್ಯಕ್ಷರು**

**ನಿರ್ದೇಶಕರುಗಳು :** ಡಿ.ಸಿ ಪ್ರಶಾಂತ್, ಬಿ.ಎನ್ ನಾಗಾರ್ಜುನ್, ರಘುನಂದ, ಬಿ. ಶಿವಕುಮಾರ್, ಕೆ.ಆರ್, ವಿಶ್ವನಾಥ್, ಜಿ.ವಿ ಬಾಲಾಜಿ, ಕೆ.ಜಿ ಕಾರ್ತೀಕ್, ಕೆ.ಎಸ್ ಮಹೇಶ್‌ಕುಮಾರ್, ಕೆ.ಎಸ್ ಗಾಯತ್ರಿ, ಎನ್. ಸರಸ್ವತಿ

# ಅಪರೂಪದ ಸಂತ; ಉದಾತ್ತ ತತ್ವಗಳ ಪ್ರತಿರೂಪ
# ಕಳಚಿದ ಆಧ್ಯಾತ್ಮ ತತ್ವಗಳ ಕೊಂಡಿ
# ಜ್ಞಾನದಲ್ಲಿ ಐಕ್ಯರಾದ ಸಿದ್ದೇಶ್ವರ ಸಿದ್ಧಯೋಗಿ-ಗಣ್ಯರು ಕಂಡಂತೆ

**2.1.2023 ಜ್ಞಾನಯೋಗಿ ಪರಮಪೂಜ್ಯ ಸಿದ್ದೇಶ್ವರ ಸ್ವಾಮಿಗಳು ಇನ್ನಿಲ್ಲವಾದರು.**

**ಲಕ್ಷಾಂತರ ಭಕ್ತರು ದುಃಖಿಸಿದರು, ಮೌನವಾದರು. ಜ್ಞಾನಯೋಗಿ ಬಗ್ಗೆ ಗಣ್ಯರ ನುಡಿ ನಮನ**



## ನಾಡು ಕಂಡ ಅಪರೂಪದ ಸಂತ

ನಮ್ಮ ನಾಡು ಕಂಡ ಅಪರೂಪದ ಅನುಭಾವಿ ಸಂತರಾದ ವಿಜಯಪುರದ ಜ್ಞಾನ ಯೋಗಾಶ್ರಮದ ಪೂಜ್ಯ ಶ್ರೀ ಸಿದ್ದೇಶ್ವರಸ್ವಾಮೀಜಿರವರು ಭೌತಿಕವಾಗಿ ಇನ್ನಿಲ್ಲವಾದುದು ಅತ್ಯಂತ ದುಃಖದ ಸಂಗತಿ ಪೂಜ್ಯ ಸ್ವಾಮೀಜಿರವರು ಪಂಚಭಾಷಾ ಪ್ರವೀಣರಾಗಿದ್ದರು, ವಾಗ್ದೇವಿಯ ಆರಾಧಕರಾಗಿದ್ದರು, ಮಹಾನ್ ಆಧ್ಯಾತ್ಮಿಕ ಜೀವಿಯಾಗಿದ್ದರು, ಸನಾತನ ಶಾಸ್ತ್ರಗ್ರಂಥಗಳು ಮತ್ತು ವಚನ ಸಾಹಿತ್ಯ ಆಧುನಿಕ ಸಮಾಜದ ವಿದ್ಯಾವಂತರಿಗೆ ಮನದಟ್ಟಾಗುವಂತೆ ಸರಳವಾಗಿ ಬೋಧಿಸಿ ಅವರ ಆಂತರ್ಯದ ಪರಿವರ್ತನೆಗೆ ಕಾರಣರಾಗಿದ್ದರು. ಕ್ಲಿಷ್ಟಕರವಾದ ವೇದೋಪನಿಷತ್ತುಗಳ ಮಂತ್ರಗಳು ಮತ್ತು ಯೋಗಸೂತ್ರಗಳನ್ನು, ಭಗವದ್ಗೀತೆ ಹಾಗೂ ವಚನ ಶಾಸ್ತ್ರ ಮುಂತಾದುವನ್ನು ಆಧುನಿಕ ವೈಜ್ಞಾನಿಕ ತತ್ವಗಳನ್ನು ಜನ ಸಾಮಾನ್ಯರಿಗೆ ನಿಲುಕುವ ಭಾಷೆಯಲ್ಲಿ ಬೋಧಿಸಿ ಪಂಡಿತ ಪಾಮರರಿಗೂ ಜ್ಞಾನ ಸುಧೆಯನ್ನು ಉಣಬಡಿಸುತ್ತಿದ್ದರು.

ಪೂಜ್ಯರು ತೋರುತ್ತಿದ್ದ ನಿಷ್ಕಲ್ಮಶ ಪ್ರೀತಿ ನಿರ್ಮಲ ಅಂತಃಕರಣ ಸರ್ವರಿಗೂ ಆದರ್ಶ ಮನದ ಮಲಿನತೆ ಅಳಿದರೆ ನೋಡುವುದೆಲ್ಲವು ದಿವ್ಯವೆ. ಕಾರಣ ಜಗವೆಲ್ಲವು ದೈವದ ಅಭಿವ್ಯಕ್ತಿಯೇ ಎಂದು ಅರಿತು ಬೋಧಿಸಿದವರು ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿರವರು. ಜನತೆ ಎಲ್ಲೆಡೆ ಸಂಚರಿಸಿ ಜ್ಞಾನದ ನುಡಿಗಳನ್ನು ಜಗದ ಜನರಿಗೆ ಬೋಧಿಸಿ, ಅಸಂಖ್ಯಾತ ಭಕ್ತರ ಮನಸ್ಸಿನ ತಮವನ್ನು ಬಲ್ಲಿದರ ನಡುವೆ ತಾವು ತಾವಾಗಿಯೇ ಇದ್ದು ನಿರಾಭಾರಿ ಸಂತರಾಗಿ ಬದುಕಿದರು. 'ಸರ್ವಂ ಖಲ್ವಿದಂ ಬ್ರಹ್ಮ ಎಂಬ ಮಹಾ ವಾಕ್ಯಕ್ಕನುಗುಣವಾಗಿ ಪೂಜ್ಯರು ಪ್ರಕೃತಿಯ ಕಣಕಣದಲ್ಲಿಯೂ ಪರಬ್ರಹ್ಮ ಚೈತನ್ಯವನ್ನೇ ಕಂಡು ಆನಂದಿಸಿದವರು. ತಮ್ಮ ಪ್ರವಚನಗಳಲ್ಲಿ ಮನುಷ್ಯ ಜನ್ಮದ ಶ್ರೇಷ್ಠತೆಯನ್ನು, ಅವುಗಳಿಂದ ಜನತೆ ಕಲಿಯಬಹುದಾದ ಬದುಕಿನ ಸೂಕ್ಷ್ಮಾತಿ ಸೂಕ್ಷ್ಮ ಪಾಠವನ್ನು ತಿಳಿಸುತ್ತಿದ್ದರು.

ಪೂಜ್ಯರು ತಮ್ಮ ಪ್ರವಚನಗಳ ಮೂಲಕ ಮಹಾವೀರ, ಬುದ್ಧ ಬಸವಾದಿ ಶರಣದ ಹಾಗೂ ನಮ್ಮ ನಾಡಿನ ಎಲ್ಲಾ ದಾರ್ಶನಿಕರ ಶ್ರೇಷ್ಠತೆಯನ್ನು ಆಧುನಿಕರಿಗೆ ಪರಿಚಯಿಸಿದ್ದರು. ಅಂತೆಯೇ ವಿಶ್ವದ ದಾರ್ಶನಿಕರಾದ ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್, ಎಪಿಕ್ಯೂರಸ್, ಲಾವೋತ್ಸೆ ಮುಂತಾದ ಪಾಶ್ಚಿಮಾತ್ಯ ತತ್ವಜ್ಞಾನಿಗಳ ತತ್ವಗಳನ್ನು ಅವುಗಳ ಸಾರ ಸರ್ವಸ್ವವನ್ನು ನಮ್ಮ ಜನರಿಗೆ ಸಾರಿದರು. ಹಾಗೆಯೇ ಜಗತ್ತಿನ ಶ್ರೇಷ್ಠ ವಿಜ್ಞಾನಿಗಳು, ಗಣಿತಜ್ಞರು, ಸಮಾಜ ಸುಧಾರಕರು, ರಾಜಕೀಯ ಮುತ್ಸದ್ದಿಗಳು, ತಂತ್ರಜ್ಞರು, ಅರ್ಥ ಶಾಸ್ತ್ರಜ್ಞರು ಮುಂತಾದ ಪುಣ್ಯ ಪುರುಷರ ಶ್ರದ್ಧೆ, ಸಿದ್ಧಿ, ಸಾಧನೆ ಹಾಗೂ ಅವರೆಲ್ಲರ ಜೀವನಾದರ್ಶಗಳನ್ನು ತಮ್ಮ ಪ್ರವಚನಗಳ ಮೂಲಕ ಎಲ್ಲರಿಗೂ ಪರಿಚಯಿಸುತ್ತಿದ್ದುದು ಮಾತ್ರವಲ್ಲ ಕೋಟ್ಯಂತರ ಮಂದಿಗೆ ಜಗತ್ತನ್ನು ಮತ್ತು ಅದರ ಸೌಂದರ್ಯವನ್ನು ನೋಡುವ ನಿಜವಾದ ದೃಷ್ಟಿಯನ್ನು ನೀಡುತ್ತಿದ್ದರು. ನಮ್ಮ ಪರಮಪೂಜ್ಯ ಗುರುಗಳಾದ ಜಗದ್ಗುರು ಡಾ. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿರವರು ಹಾಗೂ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿರವರು ಪರಸ್ಪರ ಗೌರವಾದರಣೀಯರಾಗಿದ್ದರು. ಪೂಜ್ಯರು ನಮ್ಮ ಶ್ರೀ ಕ್ಷೇತ್ರದಲ್ಲಿ ನಡೆಯುವ ಹಲವಾರು ಧರ್ಮ ಸಮ್ಮೇಳನಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯ ವಹಿಸಿ ತಮ್ಮ ಪ್ರವಚನಗಳ ಮೂಲಕ ಜನರಲ್ಲಿ ಜೀವನ ಮೌಲ್ಯಗಳನ್ನು ಬಿತ್ತುತ್ತಿದ್ದುದು ಎಂದಿಗೂ ಸ್ಮರಣೀಯ.



ಹೀಗೆ ನುಡಿದಂತೆ ನಡೆದು ತಮ್ಮ ನಡೆಗೂ ನುಡಿಗೂ ಅಂತರವಿರದಂತೆ ಬಾಳಿದ ನಿಜ ಸಂತರಾದ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿರವರು ಇನ್ನಿಲ್ಲವಾದುದರಿಂದ ಆಧ್ಯಾತ್ಮಿಕ ಲೋಕಕ್ಕೆ ಭರಿಸಲಾರದ ನಷ್ಟವುಂಟಾಗಿದೆ. ಭಗವಂತನು ಪೂಜ್ಯರ ಅಗಲಿಕೆಯಿಂದ ದುಃಖ ತಪ್ತರಾಗಿರುವ ಭಕ್ತ ವೃಂದಕ್ಕೆ ದುಃಖವನ್ನು ಸಹಿಸುವ ಶಕ್ತಿಯನ್ನು ಪೂಜ್ಯರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಆಶಿಸುತ್ತೇವೆ.

– ಡಾ॥ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ

# ಮಹಾ ಶಿವರಾತ್ರಿ : ಭಕ್ತರ ಇಷ್ಟಾರ್ಥ ಈಡೇರಿಸುವ ಶಿವನಿಗಾಗಿ ಜಾಗರಣೆ

ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದೇವರೆಂಬ ಖ್ಯಾತಿ ಶಿವ ಪರಮಾತ್ಮನಿಗಿದೆ. ಜಗತ್ತಿನಾದ್ಯಂತ ಕೋಟ್ಯಾಂತರ ಜನರು ತಮ್ಮ ಕಷ್ಟಕಾರ್ಪಣ್ಯಗಳ ನಿವಾರಣೆಗಾಗಿ ಪ್ರತಿದಿನ ಪ್ರಾರ್ಥಿಸುತ್ತಾರೆ. ಮಹಾಶಿವರಾತ್ರಿ ಆಚರಣೆ ಸಮಯದಲ್ಲಿ ಶಿವನ ದೇವಸ್ಥಾನಕ್ಕೆ ತೆರಳಿ ತಮ್ಮ ನೆಚ್ಚಿನ ದೇವರಿಗೆ ಭಕ್ತರು ಅಹೋರಾತ್ರಿ ಜಾಗರಣೆ ಮಾಡಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಮಹಾಶಿವರಾತ್ರಿ ಹಿಂದೂಗಳ ಪ್ರಮುಖ ಹಬ್ಬಗಳಲ್ಲೊಂದು. ಈ ಹಬ್ಬವನ್ನು ಮಾಘ ಮಾಸದ ಬಹುಳ ಚತುರ್ದಶಿಯಂದು ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಫೆಬ್ರುವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಶಿವರಾತ್ರಿ ಹಬ್ಬ ಬರುತ್ತದೆ. ಇಡೀ ದಿನ ಉಪವಾಸ, ಜಾಗರಣೆಗಳನ್ನು ಮಾಡಿ, ಶಿವ ಪೂಜೆ ಮಾಡುವ ಮೂಲಕ ಆಚರಿಸಲಾಗುತ್ತದೆ. ಮರುದಿನ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ತಯಾರಿಸುವರು. ತಂಬಿಟ್ಟು ಈ ಹಬ್ಬದ ಪ್ರಮುಖ ತಿನಿಸು.

ತನ್ನ ನಂಬಿ ಬಂದ ಭಕ್ತರ ಇಷ್ಟಾರ್ಥಗಳಿಗೆ ಎಂದಿಗೂ ನಿರಾಸೆ ಮಾಡದ ದಯಾಮಯಿ ಶಿವನಿಗೆ ಶಿವರಾತ್ರಿಯಂದು ಜಗತ್ತಿನಾದ್ಯಂತ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಭಾರತದಾದ್ಯಂತ ಬಹುತೇಕ ಎಲ್ಲಾ ಭಾಗಗಳಲ್ಲೂ ಆಚರಿಸುವ ಹಬ್ಬ ಇದು. ಈ ಹಬ್ಬದಂದು ದಿನವಿಡೀ ಪೂಜೆ, ಉಪವಾಸ ಮಾಡಿ, ರಾತ್ರಿಯಿಡೀ ಜಾಗರಣೆ ಮಾಡಿ ಶಿವನನ್ನು ಆರಾಧಿಸುವ ಸಂಪ್ರದಾಯವಿದೆ.

**ಶಿವರಾತ್ರಿ ಆಚರಣೆ ಕುರಿತು ಶಿವಪುರಾಣದ ಕಥೆ :** ಶಿವಪುರಾಣದಲ್ಲಿ ಶಿವಾರಾತ್ರಿಯ ಆಚರಣೆ ಬಂದಿರುವ ಬಗ್ಗೆ ಒಂದು ಸಣ್ಣ ಕಥೆ ಇದೆ.... ದೇವಲೋಕದಲ್ಲಿ ಒಮ್ಮೆ ಬ್ರಹ್ಮ ಹಾಗೂ ವಿಷ್ಣುವಿನ ನಡುವೆ ಯಾರು ಶ್ರೇಷ್ಠರು ಎಂಬ ವಿಷಯಕ್ಕೆ ವಾಗ್ವಾದಗಳು ನಡೆಯುತ್ತಿದ್ದವು. ಮಹಾ ದೇವತೆಗಳಿಬ್ಬರನ್ನೂ ಸಮಾಧಾನ ಮಾಡುವುದು ದುರ್ಲಭ ಎನಿಸಿದಾಗ, ದೇವತೆಗಳೆಲ್ಲ ಹೋಗಿ ಪರಶಿವನನ್ನು ಬೇಡಿಕೊಳ್ಳುತ್ತಾರೆ. ವಿಷ್ಣು ಹಾಗೂ ಬ್ರಹ್ಮರ ಜಗಳವನ್ನು ಶಮನ ಮಾಡುವಂತೆ ಕೋರಿಕೊಳ್ಳುತ್ತಾರೆ. ಆಗ ವಿಷ್ಣು ಮತ್ತು ಬ್ರಹ್ಮರ ನಡುವೆ ಶಿವ, ಅಗ್ನಿಕಂಭದ ರೂಪದಲ್ಲಿ ಬಂದು ನಿಂತು ತನ್ನ ಮೂಲವನ್ನು ಕಂಡುಹಿಡಿಯಲು ಸೂಚಿಸುತ್ತಾನೆ.

ಆಗ ಹಂಸದ ರೂಪ ತಾಳಿದ ಬ್ರಹ್ಮ ಅಗ್ನಿ ಕಂಭದ ಶಿರವನ್ನು ಹುಡುಕಲು ಮೇಲ್ಮುಖವಾಗಿ ಹೊರಡುತ್ತಾನೆ. ವಿಷ್ಣು ವರಾಹವತಾರ ತಾಳಿ ಕಂಭದ ತಳವನ್ನು ನೋಡುವುದಕ್ಕಾಗಿ ಪಾತಾಳಕ್ಕೆ ಇಳಿಯುತ್ತಾನೆ. ಎಷ್ಟೇ ಮುಂದೆ ಸಾಗಿದರೂ ಬ್ರಹ್ಮ ಹಾಗೂ ವಿಷ್ಣು ಇವರಿಬ್ಬರಿಗೂ ಕಂಭದ ಅಂತ್ಯವೇ ಕಾಣುವುದಿಲ್ಲ. ಅನಂತವಾಗಿರುವ ಶಿವನ ಶಕ್ತಿಯನ್ನು ನೋಡಿದ ವಿಷ್ಣು ಹಾಗೂ ಬ್ರಹ್ಮರಿಗೆ ಸತ್ಯದ ಅರಿವಾಗುತ್ತದೆ. ಆದರೆ ಶಿವನ ಜಡೆಯಿಂದ ಕೆಳಗೆ ಬೀಳುತ್ತಿದ್ದ ಕೇತಕಿ ಪುಷ್ಪದ ಬಳಿ ಬ್ರಹ್ಮ, ನೀನು ಎಲ್ಲಿಂದ ಬೀಳುತ್ತಿದ್ದೀಯ ಎಂದು ಪ್ರಶ್ನಿಸುತ್ತಾನೆ. ಆಗ ಆ ಪುಷ್ಪವು ನಾನು ಅಗ್ನಿ ಕಂಭದ ಶಿರದಿಂದ ಬೀಳುತ್ತಿದ್ದೇನೆ ಎಂಬ ಉತ್ತರ ನೀಡುತ್ತದೆ. ಆಗ ಬ್ರಹ್ಮ ಶಿವನಲ್ಲಿಗೆ ಬಂದು ಕೇತಕಿ ಪುಷ್ಪವನ್ನು ತೋರಿಸಿ, ತಾನು ಅಗ್ನಿ ಕಂಭದ ಶಿರಭಾಗವನ್ನು ನೋಡಿರುವುದಾಗಿಯೂ ಅಲ್ಲಿಂದಲೇ ಕೇತಕಿ ಪುಷ್ಪವನ್ನು ತಂದಿರುವುದಾಗಿಯೂ ಹೇಳುತ್ತಾನೆ. ಇವರಿಬ್ಬರ ಮೋಸವನ್ನು ಅರಿತ ಶಿವ, ಬ್ರಹ್ಮನನ್ನು ಯಾರೂ ಪೂಜಿಸಕೂಡದು ಎಂದು ಶಾಪ ನೀಡಿ ಲಿಂಗರೂಪ ತಾಳುತ್ತಾನೆ. ಅಂದು ಮಾಘ ಮಾಸದ ಬಹುಳ ಚತುರ್ದಶಿಯಾಗಿರುತ್ತದೆ. ಹೀಗಾಗಿ, ಶಿವ ಲಿಂಗರೂಪ ತಾಳಿದ ಮಾಘ ಮಾಸದ ಬಹುಳ ಚತುರ್ದಶಿಯಂದು ಶಿವರಾತ್ರಿಯನ್ನು ಆಚರಿಸಲಾಗುತ್ತದೆ.

**ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ :** ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ತಿಲಗಿ ಪುಷ್ಪ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ. ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಎಲ್ಲಾ ಆಡಂಬರಗಳಿಂದ ಮುಕ್ತ.





ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ.

ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಷ್ಕಲ್ಮಶ ಮತ್ತು ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸ ಭರಿತರಾಗಿ ಶಿವರಾತ್ರಿ ಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ.

**ಶಿವರಾತ್ರಿಯ ಮಹಿಮೆ :** ಕೈಲಾಸವಾಸಿ ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯಂದು ತನ್ನನ್ನು ಪೂಜಿಸುವ ಭಕ್ತರಿಗೆ ತಾನು ವಿಶೇಷವಾಗಿ ಅನುಗ್ರಹ ನೀಡುವುದಾಗಿ ಸ್ವತ: ಶಿವನೇ ಪಾರ್ವತಿಯಲ್ಲಿ ಅರುಹಿದ್ದಾನೆ ಎನ್ನುತ್ತದೆ ಶಿವಪುರಾಣ. ಶಿವ–ಪಾರ್ವತಿಯರ ವಿವಾಹ ಮಹೋತ್ಸವದ ದಿನವಿದು ಎಂಬುದು ವಿಶೇಷ. ಹಿಮವಂತನ ಮಗಳು ಪಾರ್ವತಿ ಈ ದಿನದಂದು ರಾತ್ರಿಯಿಡಿ ಶಿವನಾಮ ಪಠಿಸುತ್ತಾ, ತಪಸ್ಸು ಮಾಡಿ, ಶಿವನನ್ನು ಮೆಚ್ಚಿಸಿ, ವಿವಾಹವಾದಳೆಂಬುದು ಪ್ರತೀತಿ. ಶಿವ ರುದ್ರತಾಂಡವನಾಡಿದ ರಾತ್ರಿಯೂ ಇಂದೇ ಎನ್ನಲಾಗುತ್ತದೆ. ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರ ಮಂಥನ ನಡೆದು ವಿಷ ಉದ್ಭವವಾದಾಗ, ಅದನ್ನು ಶಿವ ಕುಡಿದ. ವಿಷ ಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎನ್ನುತ್ತದೆ ಶಿವಪುರಾಣದ ಇನ್ನೊಂದು ಮಹಿಮೆ. ಹಾಗಾಗಿ, ಭಕ್ತರು ಇಡೀ ರಾತ್ರಿ ಎಚ್ಚರವಿದ್ದು, ನೀಲಕಂಠನನ್ನು ಸ್ತುತಿಸುತ್ತಾರೆ. ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ತುಂಬಿಸಿಕೊಂಡಿದ್ದ. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸುವಂತೆ ಶಿವನನ್ನು ಪ್ರಾರ್ಥಿಸಿದ. ಆತನ ಭಕ್ತಿಗೆ ಮೆಚ್ಚಿ ಶಿವ ಗಂಗೆಯನ್ನು ಹರಿಯಬಿಟ್ಟಿದ್ದು ಇದೇ ದಿನ ಎನ್ನುತ್ತದೆ ಪುರಾಣ. ಲಿಂಗಪುರಾಣದ ಪ್ರಕಾರ, ಲಿಂಗ ರೂಪಿಯಾಗಿ ಭಕ್ತರಿಗೆ ಅನುಗ್ರಹ ನೀಡಿದ ದಿನವಿದು. ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂಬುದು ಪ್ರತೀತಿ. ಇದು ಸ್ಕಂದ ಪುರಾಣ ಒಂದು ಭಾಗ.

**ಬೇಡನ ಶಿವಭಕ್ತಿ :** ಶಿವರಾತ್ರಿ ಆಚರಣೆಯ ಕುರಿತಾಗಿ ಪ್ರಚಲಿತದಲ್ಲಿರುವ ಕಥೆಯಿದು. ಹಿಂದೆ ಬೇಡನೊಬ್ಬ ಕಾಡಿನಲ್ಲಿ ಬೇಟೆಗಾಗಿ ತೆರಳಿದ್ದ. ದಿನವಿಡಿ ಅಲೆದರೂ ಆತನಿಗೆ ಯಾವುದೇ ಬೇಟೆ ಸಿಗಲಿಲ್ಲ. ಬೇಟೆ ಅರಸಿ ಹೊರಟ ಬೇಡ ದಾರಿ ತಪ್ಪಿ ಅರಣ್ಯದಲ್ಲೇ ಅಲೆಯತೊಡಗಿದ. ಅದಾಗಲೇ ಸಂಜೆಯಾಗಿತ್ತು. ಕ್ರೂರ ಪ್ರಾಣಿಗಳು ಆತನನ್ನು ಸುತ್ತುವರಿಯತೊಡಗಿದವು. ಭಯಗ್ರಸ್ತನಾದ ಬೇಡ ಮರವೇರಿದ. ಮನದಲ್ಲೇ ಶಿವನನ್ನು ಧ್ಯಾನಿಸುತ್ತಾ ಮರದ ಎಲೆಗಳನ್ನು ಕಿತ್ತು ಕೆಳಗಡೆ ಹಾಕತೊಡಗಿದ. ಆ ಎಲೆಗಳು ಅವನಿಗರಿವಿಲ್ಲದಂತೆಯೇ ಕೆಳಗಡೆಯಿದ್ದ ಶಿವಲಿಂಗದ ಮೇಲೆ ಬೀಳತೊಡಗಿದವು. ಕಾಕತಾಳೀಯವೆಂದರೆ ಆತ ಏರಿದ್ದ ಮರ ಬಿಲ್ವಮರವಾಗಿತ್ತು. ಶಿವರಾತ್ರಿಯಂದು ಪೂರ್ತಿ ಜಾಗರಣೆಯಿದ್ದು, ಬಿಲ್ವಪತ್ರೆಯನ್ನು ಶಿವನಿಗೆ ಅರ್ಪಿಸಿದ ಬೇಡನಿಗೆ ಶಿವ ಅಭಯ ನೀಡಿದ. ಶಿವನೇ ಆತನನ್ನು ರಕ್ಷಿಸಿದ ಎಂಬ ಸುದ್ದಿ ಹರಡಿ ಭಕ್ತರು ಶಿವರಾತ್ರಿಯಂದು ಶಿವನನ್ನು ಪೂಜಿಸಲು ಆರಂಭಿಸಿದರು. ಪುಣ್ಯದ ಫಲವಾಗಿ ಬೇಡ ಮುಂದಿನ ಜನ್ಮದಲ್ಲಿ ರಾಜಾ ಚಿತ್ರಭಾನುವಾಗಿ ಜನಿಸಿದ ಎಂಬುದು ಕಥೆ. ಮಹಾಭಾರತದಲ್ಲಿ ಬರುವ ಈ ಕಥೆಯನ್ನು ಮರಣಶಯ್ಯೆಯಲ್ಲಿ ಮಲಗಿದ್ದ ಭೀಷ್ಮ ಹೇಳಿದನೆಂಬುದು ಪ್ರತೀತಿ.

**ಶಿವರಾತ್ರಿ ಆಚರಣೆ ಹಿನ್ನೆಲೆ :** ದೇವತೆಗಳು ಮತ್ತು ಅಸುರರು ಅಮೃತಕ್ಕಾಗಿ ಸಮುದ್ರ ಮಂಥನ ಮಾಡ್ತಿರಬೇಕಾದ್ರೆ ಮೊದ್ಲು ಮಡಿಕೆ ತುಂಬ ಹಾಲಾಹಲ ಉತ್ಪತ್ತಿಯಾಯಿತು.. ಆದ್ರೆ ದೇವತೆಗಳು... ಅಸುರರು ಯಾರೂ ಆ ಹಾಲಾಹಲವನ್ನು ಕುಡಿಯೋಕೆ ಮುಂದಗಲಿಲ್ಲ.. ಆ ಹಾಲಾಹಲ ಇಡೀ ನಭೋಮಂಡಲವನ್ನೇ ನಾಶಮಾಡಬಲ್ಲ ಸಾಮರ್ಥ್ಯವನ್ನು ಹೊಂದಿತ್ತು. ಹೀಗಾಗಿ ಲೋಕ ಕಲ್ಯಾಣಕ್ಕಾಗಿ ಪರಶಿವನೇ ಆ ಹಾಲಾಹಲವನ್ನು ಕುಡಿದುಬಿಟ್ಟ. ಅದೇ ಸಮಯಕ್ಕೆ ಪತ್ನಿ ಪಾರ್ವತಿ ದೇವಿ ಬಂದು ಆ ವಿಷ ಶಿವನ ಹೊಟ್ಟೆ ಸೇರದಂತೆ ಗಂಟಲಲ್ಲೇ ತಡೆ ಹಿಡಿದಳು... ವ್ಯಕ್ತಿಗಳು ನಿದ್ರಿಸುತ್ತಿದ್ದರೆ ವಿಷವು ಬೇಗನೆ ದೇಹದ ತುಂಬ ಹರಡುತ್ತದೆ.. ಹೀಗಾಗಿ ದೇವತೆಗಳೆಲ್ಲರೂ ಶಿವನ ಭಜನೆ ಮಾಡಿ ಶಿವನನ್ನು ಎಚ್ಚರವಿರಿಸಿದರು.. ಹೀಗಾಗಿ ಈ ಪವಿತ್ರ ದಿನವನ್ನು ಶಿವರಾತ್ರಿ ಎಂದು ಆಚರಿಸಲಾಗುತ್ತದೆ.

**ಮಹಾಶಿವರಾತ್ರಿಯ ಉಪವಾಸ ಮತ್ತು ಜಾಗರಣೆಯ ಮಹತ್ವ :** ಪ್ರತಿ ವರ್ಷದ ಶಿವರಾತ್ರಿಯ ಸಮಯದಲ್ಲಿ ಶಿವನು, ಪಾರ್ವತಿಯ ಜೊತೆಯಲ್ಲಿ ಭೂಮಿಗೆ ಆಗಮಿಸುತ್ತಾನೆ.. ಭೂ–ಸಂಚಾರ ಮಾಡುತ್ತಾನೆ.. ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣಗೊಳ್ಳುತ್ತಾನೆ.. ಹೀಗಾಗಿ ಶಿವರಾತ್ರಿಯ ಶಿವನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿ ಇದೆ.

ಶಿವರಾತ್ರಿಯ ಆಚರಣೆಯ ವೈಜ್ಞಾನಿಕ ಮಹತ್ವ : ಸೂರ್ಯ ಮತ್ತು ಚಂದ್ರರ ಚಲನೆಯಿಂದಾಗುವ ಎಲ್ಲಾ ಕಾಲ ವ್ಯತ್ಯಾಸಕ್ಕೆ ಈ ನಮ್ಮ ದೇಹ ಹೊಂದಿಕೊಳ್ಳ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಹಬ್ಬದ ಆಚರಣೆ ಬಹು ಮುಖ್ಯ. ಈ ಸಮಯದಲ್ಲಿ ಛಳಿಗಾಲವು ಮುಗಿದು ಬೇಸಿಗೆ ಕಾಲವು ಪ್ರಾರಂಭಗೊಳ್ಳುವುದು. ಅಂದರೆ ಈ ದಿನದಂದು ಚಳಿಗಾಲ ಉತ್ತುಂಗದಲ್ಲಿದ್ದು ಅಂದು ಕೃಷ್ಣ ಪಕ್ಷದ ಕೊನೆಯ ದಿನವೂ ಆಗಿರುತ್ತದೆ. ಈ ದಿನದಲ್ಲಿ ಸೂರ್ಯನ ಶಾಖ ಕಡಿಮೆಯಾಗಿರುತ್ತದೆ ಮತ್ತು ಚಂದ್ರನ

ಪ್ರಕಾಶವೂ ಕ್ಷೀಣಿಸಿರುತ್ತದೆ. ನಮ್ಮ ಪೂರ್ವಜರು ಇದನ್ನೆಲ್ಲಾ ಅರಿತೇ ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದರು. ಈ ವ್ಯತ್ಯಯದ ಸಮಯದಲ್ಲಿ ನಮ್ಮ ದೇಹದಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತವೆ. ಈ ಕಾಲ ವ್ಯತ್ಯಾಸದ ಸಮಯದಲ್ಲಿ ನಮ್ಮಲ್ಲಿ ಉಸಿರಾಟದ ತೊಂದರೆ (ನೆಗಡಿ, ಕೆಮ್ಮು, ಶೀತ ಮತ್ತಿತರೆ) ಬರುವುದು. ಈ ದಿನದಂದು ನಾವು ಮಾಡುವ ಶಿವನ ಪೂಜೆ, ಉಪವಾಸಗಳು ನಮಗೆ ತುಂಬಾ ಉಪಯುಕ್ತ. ಅಂದು ಪರಶಿವನಿಗೆ ನೀರಿನ ಅಭಿಷೇಕ ಮತ್ತು ಬಿಲ್ವ ಪತ್ರೆಯ ಪೂಜೆ. ಬಿಲ್ವ ಪತ್ರೆಯಲ್ಲಿ ಉಸಿರಾಟದ ತೊಂದರೆ ನಿವಾರಿಸುವ ಗುಣವಿದೆ. ಬಿಲ್ವವನ್ನು ಲಿಂಗದ ಮೇಲೆ ಹಾಕುವಾಗ ಅದರ ವಾಸನೆ ನಮ್ಮ ದೇಹದ ಒಳಗೆ ಹೋಗುವುದು. ಬಿಲ್ವವನ್ನು ಮೂಸಿ ಎಸೆಯುವುದು ಸರಿಯಾದ ವಿಧಾನ. ಶಿವನ ಲಿಂಗವು ಕಲ್ಲಿನದಾಗಿದ್ದು ಅದರ ಮೇಲೆ ನೀರನ್ನು ಸುರಿಯುವುದರಿಂದ ಬಹಳಷ್ಟು ಶಕ್ತಿ ಹೊರಹೊಮ್ಮುತ್ತದೆ. ಅದೊಂದು ವಿಶಿಷ್ಟ ಕಲ್ಲಿನಿಂದ ಮಾಡಿದ ಲಿಂಗವಾಗಿರುತ್ತದೆ.

**ಜಾಗರಣೆ, ಹಬ್ಬದ ಆಚರಣೆ :** ಕಾಶಿ ವಿಶ್ವನಾಥ, ಗೋಕರ್ಣದ ಮಹಾಬಲೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ರಾಮೇಶ್ವರದ ರಾಮೇಶ್ವರ ಸೇರಿದಂತೆ ರಾಜ್ಯ, ದೇಶ, ವಿದೇಶಗಳ ಶಿವದೇವಾಲಯಗಳಲ್ಲಿ ಅಂದು ವಿಶೇಷ ಪೂಜೆ ನಡೆಯುತ್ತದೆ. ಬಿಲ್ವಾರ್ಚನೆ, ರುದ್ರಾಭಿಷೇಕ, ಶಿವನಾಮ ಧ್ಯಾನಗಳ ಮೂಲಕ ಶಿವನನ್ನು ಆರಾಧಿಸಲಾಗುತ್ತದೆ. ಇಡೀ ರಾತ್ರಿ ಶಿವದೇವಾಲಯಗಳಲ್ಲಿ ರುದ್ರಪಠಣದ ಜೊತೆ ಜಾಗರಣೆ ನಡೆಯುತ್ತದೆ.

ಶಿವರಾತ್ರಿಯಂದು ಬೆಳಗ್ಗೆ ಬೇಗನೆ ಏಳುವ ಭಕ್ತರು, ಸ್ನಾನ ಮಾಡಿ, ಶುಚಿರ್ಭೂತರಾಗಿ ಶಿವದೇವಾಲಯಕ್ಕೆ ತೆರಳುತ್ತಾರೆ. ಕೆಲವರು ಕೈಲಾಸಯಂತ್ರ ರಚಿಸಿ, ಮನೆಯಲ್ಲಿಯೇ ಶಿವನಿಗೆ ವಿಶೇಷ ಪೂಜೆ ನಡೆಸುತ್ತಾರೆ. ಗಂಗಾ, ಬ್ರಹ್ಮಪುತ್ರ, ಕೃಷ್ಣ, ಕಾವೇರಿ, ತ್ರಿವೇಣಿ ಸಂಗಮ ಸೇರಿದಂತೆ ಪುಣ್ಯನದಿಗಳಲ್ಲಿ ಭಕ್ತರು ಸ್ನಾನ ಮಾಡುತ್ತಾರೆ. ಕೆಲವರು ಹಾಲು, ಹಣ್ಣು ಸೇವಿಸಿ ಲಘು ಉಪಹಾರ ಸೇವಿಸಿದರೆ, ಕೆಲವು ಭಕ್ತರು ದಿನವಿಡಿ ಏನನ್ನೂ ತಿನ್ನದೆ, ನೀರನ್ನೂ ಕುಡಿಯದೆ ಉಪವಾಸ ಇರುತ್ತಾರೆ. ಭಸ್ಮ ಲೇಪಿಸಿಕೊಂಡು, ಬಿಲ್ವಾರ್ಚನೆ ಮೂಲಕ ರುದ್ರ ಪಠಣ



ಹಬ್ಬದ ಆಚರಣೆಯ ವಿಶೇಷ.

ಅಭಿಷೇಕಪ್ರಿಯ ಎಂದೇ ಖ್ಯಾತನಾದ ಶಿವನಿಗೆ ದಿನವಿಡಿ ಹಾಲು, ಜೇನುತುಪ್ಪ ಹಾಗೂ ನೀರಿನ ಅಭಿಷೇಕ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಶಿವಲಿಂಗಕ್ಕೆ ಅಭಿಷೇಕ ಮಾಡಲಾಗುತ್ತದೆ. ಬಿಲ್ವಪತ್ರೆ, ತುಳಸಿ, ಶ್ರೀ ಗಂಧ, ಹಾಲು, ಜೇನುತುಪ್ಪಗಳಿಂದ ಅಭಿಷೇಕ ನಡೆಯುತ್ತದೆ. ಶಿವ ಪಂಚಾಕ್ಷರಿ ಮಂತ್ರ "ಓಂ ನಮ: ಶಿವಾಯ", ಹರ ಹರ ಮಹಾದೇವ, ಶಂಭೋ ಶಂಕರ... ಶಿವದೇವಾಲಯಗಳಲ್ಲಿ ಮಾರ್ದನಿಸುತ್ತದೆ. ನಾಲ್ಕು ಆಯಾಮಗಳ ರುದ್ರಪಠಣ, ಶಿವರಾತ್ರಿ ಪೂಜೆಯ ವಿಶೇಷ. ಶಿವಪುರಾಣದ ಪ್ರಕಾರ ರುದ್ರ ಹಾಗೂ ಚಮೆಗಳ ಪಠಣ ಶಿವನಿಗೆ ಅಚ್ಚುಮೆಚ್ಚು. ದೇವಾಲಯಗಳಲ್ಲಿ ಸಂಜೆ 6 ಗಂಟೆಯಿಂದ ಮೊದಲ್ಗೊಂಡು ಮುಂಜಾನೆ 6 ಗಂಟೆಯವರೆಗೆ ರುದ್ರಪಠಣದ ಮೂಲಕ ಶಿವ ಸ್ತುತಿ, ಜಾಗರಣೆ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಮಂಗಳಾರತಿ ಮಾಡಲಾಗುತ್ತದೆ. ಬೆಳಗ್ಗೆ 6 ಗಂಟೆಗೆ ಮಹಾಮಂಗಳಾರತಿ ಆಚರಣೆ ಮೂಲಕ ಜಾಗರಣೆ ಮುಕ್ತಾಯಗೊಳ್ಳುತ್ತದೆ. ಮೊದಲನೆಯ ಆಯಾಮದಲ್ಲಿ ಹಾಲು, ಎರಡನೆಯ ಆಯಾಮದಲ್ಲಿ ಮೊಸರು, ಮೂರನೆಯ ಆಯಾಮದಲ್ಲಿ ತುಪ್ಪ ಹಾಗೂ ನಾಲ್ಕನೆಯ ಆಯಾಮದಲ್ಲಿ ಜೇನುತುಪ್ಪಗಳಿಂದ ಶಿವನಿಗೆ ಅಭಿಷೇಕ ಮಾಡುವ ಪದ್ಧತಿಯೂ ಕೆಲವೆಡೆ ಇದೆ.

ಶಿವನನ್ನು ಪ್ರತಿದಿನ ಧ್ಯಾನಿಸುವ ಮೂಲಕ ನಮ್ಮ ಹೃದಯ ಶಿವನನ್ನು ಜಾಗೃತ ಸ್ಥಿತಿಯಲ್ಲಿಡುವುದೇ ಮಹಾಶಿವರಾತ್ರಿ ಪ್ರಮುಖ ಸಂದೇಶವಾಗಿದೆ.

**– ಸವಿತಾ ನಾಯ್ಕ್, ಬೆಂಗಳೂರು.**

## ಕಟ್ಟಡ ನಿರ್ಮಾಣದ ಪ್ರಗತಿ ವೀಕ್ಷಣೆ





**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡರವರು ಮತ್ತು ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು ನೂತನ ಆಡಳಿತ ಕಛೇರಿಯ ನಿರ್ಮಾಣ ಕಾರ್ಯದ ಪ್ರಗತಿಯನ್ನು ವೀಕ್ಷಿಸಿದರು.**